# pಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ

## ಆಗಾಗ ಕೇಳಲಾಗುವ ಪ್ರಶ್ನೆಗಳು (ಎಫ್ಎಕ್ಯೂ)

1. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ ಎಂದರೇನು?

   ಪ್ರಧಾನಮಂತ್ರಿ ಫಸಲ್‌ಬಿಮಾ ಯೋಜನಾ, ಅನಿಶ್ಚಿತತೆ ಮತ್ತು ಪ್ರತಿಕೂಲ ಹವಾಮಾನ ವೈಪರೀತ್ಯಗಳಿಂದ ಹೊಲದಲ್ಲಿ ಆಗುವ ಬೆಳೆ ನಷ್ಟಗಳಿಂದ ರೈತರಿಗೆ ರಕ್ಷಣೆ ಒದಗಿಸುತ್ತದೆ.

---

2. ಬೆಳೆಗಳು ಬಾಧಿತವಾಗುವ ಕಾರಣಗಳು ಯಾವುವು ಮತ್ತು ಯಾವ ಅಪಾಯಗಳಿಂದ ಸುರಕ್ಷೆ ಒದಗಿಸಲಾಗುತ್ತೆದೆ?

ನೈಸರ್ಗಿಕ ವಿಪತ್ತು, ಕೀಟ ದಾಳಿಗಳು ಮತ್ತು ಅತಿಯಾದ ಮಳೆ ಅಥವಾ ಮಳೆ ಕೊರತೆಯಂಥ ಹವಾಮಾನ ವೈಪರೀತ್ಯಗಳು, ಅತಿಯಾದ ಅಥವಾ ಕಡಿಮೆ ತಾಪಮಾನ, ಆರ್ದ್ರತೆ, ಹಿಮ, ಬಿರುಗಾಳಿ ಇತ್ಯಾದಿ

---

3. ದಾವೆಯ ಮೌಲ್ಯಮಾಪನವನ್ನು ಹೇಗೆ ಮಾಡಲಾಗುತ್ತದೆ?

   a. ಒಂದು ವೇಳೆ ವಿಮೆ ಮಾಡಿಸಿದ ಋತುವಿನಲ್ಲಿ ವಿಮಾ ಘಟಕಗಳ (ಅಗತ್ಯ ಸಂಖ್ಯೆಯ ಸಿಸಿಗಳ ಆಧಾರದಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ) ವಿಮೆ ಮಾಡಿಸಿದ ಬೆಳೆಯ ಪ್ರತಿ ಹೆಕ್ಟೇರ್‌ನೈಜ ಇಳುವರಿ ನಿರ್ದಿಷ್ಟಪಡಿಸಿದ ನಿಗದಿತ ಮಿತಿ ಇಳುವರಿಗಿಂತ ಕಡಿಮೆಯಾದರೆ, ಆ ವ್ಯಾಖ್ಯಾನಿತ ಪ್ರದೇಶದಲ್ಲಿನ ಎಲ್ಲ ರೈತರು ಮತ್ತು ಬೆಳೆಗಳು ಇಳುವರಿ ಕೊರತೆ ಅನುಭವಿಸಿವೆ ಎಂದು ಪರಿಗಣಿಸಲಾಗುತ್ತದೆ.

      ಈ ಕೆಳಗಿನ ಸೂತ್ರದ ಅನುಸಾರ 'ದಾವೆ'ಯನ್ನು ಲೆಕ್ಕಾಚಾರ ಮಾಡಲಾಗುತ್ತದೆ:

(ನಿಗದಿತ ಮಿತಿ ಇಳುವರಿ - ನೈಜ ಇಳುವರಿ)

______________________________X ವಿಮೆಯ ಮೊತ್ತ

ನಿಗದಿತ ಮಿತಿ ಇಳುವರಿ

ಇಲ್ಲಿ, ಒಂದು ಅಧಿಸೂಚಿತ ವಿಮಾ ಘಟಕದಲ್ಲಿ ಒಂದು ಬೆಳೆಗೆ ನಿಗದಿತ ಮಿತಿ ಇಳುವರಿ (ಟಿವೈ) ಅಂದರೆ ಆ ಬೆಳೆಗೆ ಅನ್ವಯವಾಗುವ ನಷ್ಟಪರಿಹಾರ ಪ್ರಮಾಣದಿಂದ ಗುಣಿಸಲ್ಪಟ್ಟ ಆ ಋತುವಿನ ಕಳೆದ ಏಳು ವರ್ಷಗಳ ಪೈಕಿ ಅತ್ಯುತ್ತಮ ಐದು ವರ್ಷಗಳ ಇಳುವರಿಯ ಸರಾಸರಿಯಾಗಿರುತ್ತದೆ.

b. ಕೇಂದ್ರ ಮತ್ತು ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಿಂದ ಆ ಋತುವಿಗೆ ಪ್ರೀಮಿಯಂ ಸಬ್ಸಿಡಿಯನ್ನು ವಿಮಾ ಸಂಸ್ಥೆ ಸ್ವೀಕರಿಸಿದ ಬಳಿಕ ರೈತರ ದಾವೆಯ ಇತ್ಯರ್ಥ ಆರಂಭವಾಗುತ್ತದೆ.

c. ಸಂಬಂಧಿಸಿದ ವಿಮಾ ಸಂಸ್ಥೆಗಳಿಂದ ದಾವೆ ಮೊತ್ತವನ್ನು ಸ್ವೀಕರಿಸಿದ ಬಳಿಕ, ಆರ್ಥಿಕ ಸಂಸ್ಥೆಗಳು/ ಬ್ಯಾಂಕ್‌ಗಳು ಆ ದಾವೆ ಮೊತ್ತವನ್ನು ಫಲಾನುಭವಿ ರೈತನ ಖಾತೆಗೆ 1 ವಾರದ ಒಳಗೆ ಪಾವತಿಸಬೇಕು ಮತ್ತು 7 ದಿನಗಳ ಒಳಗಾಗಿ ಫಲಾನುಭವಿಗಳ ಸಂಪೂರ್ಣ ವಿವರಗಳನ್ನು ಶಾಖೆಯ ಕಚೇರಿಯಲ್ಲಿ ಪ್ರದರ್ಶಿಸಬೇಕು ಹಾಗೂ ಪರಿಶೀಲನೆ ಮತ್ತು ಲೆಕ್ಕಪರಿಶೋಧನೆಗಾಗಿ ಬಳಕೆ ಪ್ರಮಾಣಪತ್ರದೊಂದಿಗೆ ವಿಮಾ ಸಂಸ್ಥೆಗೆ ವರದಿ ಸಲ್ಲಿಸಬೇಕು.

d. ಒಂದು ವೇಳೆ ರೈತರಿಗೆ ಐಚ್ಛಿಕ ಆಧಾರದಲ್ಲಿ, ಅಂದರೆ ಮಧ್ಯವರ್ತಿಗಳ ಮೂಲಕ ವಿಮಾ ಸುರಕ್ಷೆ ಒದಗಿಸಿದ್ದರೆ, ಪಾವತಿಸಬೇಕಾದ ದಾವೆಯನ್ನು ದಾವೆಯ ವಿವರಗಳ ಮಾಹಿತಿಯೊಂದಿಗೆ ವಿಮಾ ಕಂಪನಿಯಿಂದ ನೇರವಾಗಿ ರೈತರ ವೈಯಕ್ತಿಕ ಖಾತೆಗೆ ಪಾವತಿ ಮಾಡಲಾಗುತ್ತದೆ.

---

4. ಈ ಯೋಜನೆಯಡಿ ವಿಧಿಸಲಾಗುವ ಪ್ರೀಮಿಯಂ ದರಗಳು ಎಷ್ಟು?

ಪಿಎಂಎಫ್‌ಬಿವೈ ಯೋಜನೆಯಡಿ ವಿಧಿಸಲಾಗುವ ವಿಮಾ ಗಣಿತದ ಪ್ರೀಮಿಯಂ ದರಗಳು ಈ ಕೆಳಗಿನಂತಿವೆ:-

a. ಮುಂಗಾರು ಬೆಳೆಗಳಿಗೆ, ರೈತರು ಪಾವತಿಸಬೇಕಾದ ಗರಿಷ್ಠ ಪ್ರೀಮಿಯಂ ವಿಮೆ ಮೊತ್ತದ 2% ಅಥವಾ ವಿಮಾ ಗಣಿತದ ಪ್ರೀಮಿಯಂ ದರ ಇವುಗಳಲ್ಲಿ ಯಾವುದು ಕಡಿಮೆಯೋ ಅದು.

b. ಹಿಂಗಾರು ಬೆಳೆಗಳಿಗೆ, ರೈತರು ಪಾವತಿಸಬೇಕಾದ ಗರಿಷ್ಠ ಪ್ರೀಮಿಯಂ ವಿಮೆ ಮೊತ್ತದ 1.5% ಅಥವಾ ವಿಮಾ ಗಣಿತದ ಪ್ರೀಮಿಯಂ ದರ ಇವುಗಳಲ್ಲಿ ಯಾವುದು ಕಡಿಮೆಯೋ ಅದು.

HDFC ERGO General Insurance Company Limited. IRDAI Reg. No.146. CIN: U66030MH2007PLC177117. Registered & Corporate Office: 1st Floor, HDFC House, 165-166 Backbay Reclamation, H. T. Parekh Marg, Churchgate, Mumbai – 400 020. For more details on the risk factors, terms and conditions, please read the sales brochure/ prospectus before concluding the sale. Trade Logo displayed above belongs to HDFC Ltd and ERGO International AG and used by the Company under license. UIN: CSC - Pradhan Mantri Fasal Bima Yojana - HDE-AG-P18-25-V01-17-18, Pradhan Mantri Fasal Bima Yojana- IRDAN125P0003V01201617

c. ಹಿಂಗಾರು ಬೆಳೆಗಳಿಗೆ, ರೈತರು ಪಾವತಿಸಬೇಕಾದ ಗರಿಷ್ಠ ಪ್ರೀಮಿಯಂ ವಿಮೆ ಮೊತ್ತದ 5 % ಅಥವಾ ವಿಮಾ ಗಣಿತದ ಪ್ರೀಮಿಯಂ ದರ ಇವುಗಳಲ್ಲಿ ಯಾವುದು ಕಡಿಮೆಯೋ ಅದು.

---

5. ತಡೆಹಿಡಿಯಲ್ಪಟ್ಟ ಬಿತ್ತನೆ ದಾವೆ ರೈತರಿಗೆ ಹೇಗೆ ಅನ್ವಯವಾಗುತ್ತದೆ?

**ತಡೆಹಿಡಿಯಲ್ಪಟ್ಟ ಬಿತ್ತನೆ/ ನಾಟಿ ಆಪತ್ತು:** ಮಳೆ ಕೊರತೆ ಅಥವಾ ಪ್ರತಿಕೂಲ ಋತುಮಾನ ಪರಿಸ್ಥಿತಿಗಳಂಥ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳ ಕಾರಣದಿಂದ ಒಂದು ವೇಳೆ ಅಧಿಸೂಚಿತ ಪ್ರದೇಶದಲ್ಲಿ ವಿಮೆ ಮಾಡಿಸಿದ ಬಹುತೇಕ ಬೆಳೆಗಳ ಬಿತ್ತನೆ/ ನಾಟಿ ಮಾಡುವುದರಿಂದ ತಡೆಹಿಡಿಯಲ್ಪಟ್ಟರೆ, ವಿಮೆ ಮೊತ್ತದ ಗರಿಷ್ಠ 25% ನಷ್ಟ ಪರಿಹಾರ ದಾವೆಗಳಿಗೆ ವಿಮೆ ಮಾಡಿಸಿರುವ ಬೆಳೆ ಅರ್ಹವಾಗಿರುತ್ತದೆ.

I. **ಒಂದು ವೇಳೆ ಅಧಿಸೂಚಿತ ಘಟಕದಲ್ಲಿ ಬಿತ್ತನೆ ಮಾಡಿದ 75%ಗೂ ಹೆಚ್ಚು ಬೆಳೆಗಳು ಆರಂಭಿಕ ಹಂತದಲ್ಲಿ ವ್ಯಾಪಕವಾದ ಅರ್ಹ ಆಪತ್ತುಗಳಿಂದ ಬಾಧಿತವಾಗಿ ಬೆಳೆಯ ಸಂಪೂರ್ಣ ನಷ್ಟಕ್ಕೆ ಕಾರಣವಾದರೆ ಅಥವಾ ರೈತನು ಬಿತ್ತನೆ ಅಥವಾ ಬೆಳೆಯನ್ನು ನಾಟಿ ಮಾಡುವ ಸ್ಥಿತಿಯಲ್ಲಿ ಇಲ್ಲದಿದ್ದರೆ (ಅಥವಾ) ಮಳೆಕೊರತೆ ಅಥವಾ ಅತಿಯಾದ ಮಳೆಯಿಂದ ಬೀಜದ ಮೊಳಕೆ ಅಥವಾ ಬೆಳೆಯ ಚಿಗುರುವಿಕೆ ಆಗದಿದ್ದರೆ ರೈತರಿಗೆ ಸುರಕ್ಷೆ ಅನ್ವಯವಾಗುತ್ತದೆ.**

II. **ಅರ್ಹತಾ ಮಾನದಂಡ:**
**ಹಾನಿಗೆ ಮುಂಚೆ ಪ್ರೀಮಿಯಂ ಪಾವತಿಸಿರುವ/ ಅವರ ಖಾತೆಯಿಂದ ಪ್ರೀಮಿಯಂ ಮೊತ್ತ ಪಾವತಿಯಾಗಿರುವ ರೈತರು ಮಾತ್ರ. ಋತುವಿನ ಆರಂಭದಲ್ಲಿ 15 ದಿನಗಳ ಒಳಗೆ ಅಧಿಸೂಚಿತ ವಿಮಾ ಘಟಕ ಮತ್ತು ಬೆಳೆಗಳ ಬಿತ್ತನೆಯ ಸಾಮಾನ್ಯ ಪ್ರದೇಶವನ್ನು ರಾಜ್ಯ ಸರ್ಕಾರ ಒದಗಿಸುತ್ತದೆ.**
**ಒಂದು ವೇಳೆ ಮೇಲೆ ಹೇಳಿದ ಯಾವುದೇ ವಿಪತ್ತುಗಳ ಕಾರಣದಿಂದ ಅಧಿಸೂಚಿತ ಬೆಳೆಗೆ 75% ಗಿಂತ ಹೆಚ್ಚು ಬಿತ್ತನೆ ಪ್ರದೇಶ ಬಿತ್ತನೆಯಾಗದೆ ಉಳಿದರೆ ಮಾತ್ರ "ತಡೆಹಿಡಿಯಲ್ಪಟ್ಟ ಬಿತ್ತನೆ/ ನಾಟಿ" ಪರಿಹಾರ ನೀಡಲಾಗುತ್ತದೆ.**

III. **ನಷ್ಟ ಮೌಲ್ಯಮಾಪನ ಪ್ರಕ್ರಿಯೆ:**
- ✓ **ಪ್ರಮುಖ ಬೆಳೆಗಳಿಗೆ ಮಾತ್ರ ವಿಮಾ ಸುರಕ್ಷೆ ಲಭ್ಯವಿರುತ್ತದೆ.**
- ✓ **ಪರಿಹಾರ, ವಿಮೆ ಮೊತ್ತದ 25%ನಷ್ಟು ಇರುತ್ತದೆ ಮತ್ತು ಆ ನಂತರ ಪಾಲಿಸಿಯನ್ನು ಮುಕ್ತಾಯಗೊಳಿಸಲಾಗುತ್ತದೆ.**

HDFC ERGO General Insurance Company Limited. IRDAI Reg. No.146. CIN: U66030MH2007PLC177117. Registered & Corporate Office: 1st Floor, HDFC House, 165-166 Backbay Reclamation, H. T. Parekh Marg, Churchgate, Mumbai – 400 020. For more details on the risk factors, terms and conditions, please read the sales brochure/ prospectus before concluding the sale. Trade Logo displayed above belongs to HDFC Ltd and ERGO International AG and used by the Company under license. UIN: CSC - Pradhan Mantri Fasal Bima Yojana - HDE-AG-P18-25-V01-17-18, Pradhan Mantri Fasal Bima Yojana- IRDAN125P0003V01201617

ಗಮನಿಸಿ: ಯೋಜನೆ ಮಾರ್ಗಸೂತ್ರಗಳಿಗೆ ಅನುಸಾರ, ಪ್ರೀಮಿಯಂ ಸಬ್ಸಿಡಿಯ ಸರ್ಕಾರಿ ಪಾಲಿನ ಅಂತಿಮ ಸ್ವೀಕೃತಿಗಾಗಿ ವಿಮಾ ಸಂಸ್ಥೆ ಕಾಯದೆ, ರಾಜ್ಯ ಸರ್ಕಾರ ಅಧಿಸೂಚನೆ/ ಆದೇಶ ಹೊರಡಿಸಿದ 30 ದಿನಗಳ ಒಳಗೆ ವಿಮಾ ಸಂಸ್ಥೆ ದಾವೆ ಪರಿಹಾರವನ್ನು ವಿತರಿಸುತ್ತದೆ.

---

6. ಬೆಳೆ ಬೆಳವಣಿಗೆ ಹಂತದಲ್ಲಿ ರೈತರಿಗೆ ಯಾವ ಸುರಕ್ಷೆ ಒದಗಿಸಲಾಗುತ್ತದೆ?

**ಬೆಳೆಯುತ್ತಿರುವ ಬೆಳೆ (ಬಿತ್ತನೆಯಿಂದ ಕೊಯ್ಲಿನವರೆಗೆ): ಬೆಳೆ ಬೆಳೆಯುವ ಹಂತದಲ್ಲಿ ತಡೆಯಲು ಸಾಧ್ಯವಿಲ್ಲದ ಕಾರಣಗಳಿಂದ ಉಂಟಾಗುವ ಇಳುವರಿ ನಷ್ಟಗಳಿಗೆ ಸಮಗ್ರ ಆಪತ್ತು ವಿಮೆಯನ್ನು ನೀಡಲಾಗುತ್ತದೆ, ಉದಾಹರಣೆಗೆ, ಬರ, ಮಳೆ ಅಭಾವ, ಪ್ರವಾಹ, ಮುಳುಗಡೆ, ಕೀಟಗಳು ಮತ್ತು ರೋಗಗಳು, ಭೂಕುಸಿತಗಳು, ನೈಸರ್ಗಿಕ ಬೆಂಕಿ ಮತ್ತು ಸಿಡಿಲು, ಮುಸಲಧಾರೆ ಮಳೆ, ಆಲಿಕಲ್ಲು ಮಳೆ, ಚಂಡಮಾರುತ, ತೂಫಾನ್, ಬಿರುಗಾಳಿ, ಚಂಡಮಾರುತ ಮತ್ತು ಸುಂಟರಗಾಳಿ.**

I. **ಒಂದು ವೇಳೆ ಪ್ರವಾಹ, ಸುದೀರ್ಘ ಅಭಾವ, ತೀವ್ರ ಬರ ಇತ್ಯಾದಿಗಳಿಂದ ನಿರೀಕ್ಷಿತ ಇಳುವರಿ 50%ಗಿಂತ ಕಡಿಮೆ ಇದ್ದರೆ ಮಧ್ಯಮ ಋತುವಿನ ಪ್ರತಿಕೂಲ ದಾವೆಗಳ ಕಾರಣದಿಂದ ದಾವೆಗಳ ಆನ್‌ಅಕೌಂಟ್‌ಪಾವತಿಗಳು ಬೆಳೆಯುತ್ತಿರುವ ಬೆಳೆಗಳಿಗೆ ಅನ್ವಯವಾಗುತ್ತವೆ.**

II. ರೈತರಿಗೆ ಅರ್ಹತಾ ಮಾನದಂಡ ಹಾನಿಗೆ ಮುಂಚೆ ಪ್ರೀಮಿಯಂ ಪಾವತಿಸಿರುವ ಅಥವಾ ಅವರ ಖಾತೆಯಿಂದ ಪ್ರೀಮಿಯಂ ಮೊತ್ತ ಪಾವತಿಯಾಗಿರುವವರು ಮಾತ್ರ.

ಗಮನಿಸಿ: ಒಂದು ವೇಳೆ ಸಾಮಾನ್ಯ ಕೊಯ್ಲಿನ ಸಮಯಕ್ಕಿಂತ 15 ದಿನಗಳ ಮುಂಚೆ ಪ್ರತಿಕೂಲ ಪರಿಸ್ಥಿತಿ ಸಂಭವಿಸಿದರೆ, ಈ ನಿಯಮವನ್ನು ಜಾರಿ ಮಾಡುವುದಿಲ್ಲ. ಪರೋಕ್ಷ ಸೂಚಕಗಳನ್ನು ಆಧರಿಸಿ ಹಾನಿ ಅಧಿಸೂಚನೆ ಮೂಲಕ ರಾಜ್ಯ ಸರ್ಕಾರ ನಿಯಮವನ್ನು ಜಾರಿ ಮಾಡುತ್ತದೆ.

III. **ನಷ್ಟ ಮೌಲ್ಯಮಾಪನ ಪ್ರಕ್ರಿಯೆ:**

ಸರ್ಕಾರದ ಜೊತೆ ಜಂಟಿ ನಷ್ಟ ಮೌಲ್ಯಮಾಪನ ಮಾಡಲಾಗುತ್ತದೆ ಮತ್ತು ಒಂದು ವೇಳೆ ಅನ್ವಯವಾಗುವುದಿದ್ದರೆ ಆನ್‌ಅಕೌಂಟ್ ಪಾವತಿಯನ್ನು ಈ ಕೆಳಗಿನ ಸೂತ್ರದ ಅನುಸಾರ ಲೆಕ್ಕಾಚಾರ ಮಾಡಲಾಗುತ್ತದೆ:

(ನಿಗದಿತ ಮಿತಿ ಇಳುವರಿ - ಅಂದಾಜು ಇಳುವರಿ) x ವಿಮೆಯ ಮೊತ್ತ x 25%

ನಿಗದಿತ ಮಿತಿ ಇಳುವರಿ

ಗಮನಿಸಿ: ಪಾವತಿಸುವ ಗರಿಷ್ಠ ಮೊತ್ತ, ಅಂತಿಮ ದಾವೆಗಳ ವಿರುದ್ಧದ ಹೊಂದಾಣಿಕೆಗೆ ಒಳಪಟ್ಟು, ಸಂಭವನೀಯ ದಾವೆಗಳ 25% ನಷ್ಟು ಇರುತ್ತದೆ.

**IV. ನಷ್ಟ ಮೌಲ್ಯಮಾಪನ ಮತ್ತು ವರದಿ ಸಲ್ಲಿಕೆಗೆ ಸಮಯದ ಚೌಕಟ್ಟು**

ಹಾನಿ ಸಂಭವಿಸಿದ 7 ದಿನಗಳ ಒಳಗೆ ಆನ್‌ಅಕೌಂಟ್ ನಷ್ಟ ಅರ್ಹತೆ ವಿವರಗಳನ್ನು ಸರ್ಕಾರ ಒದಗಿಸುತ್ತದೆ. ಹಾನಿ ಸಂಭವಿಸಿದ 15 ದಿನಗಳ ನಷ್ಟ ಮೌಲ್ಯಮಾಪನವನ್ನು ಪೂರ್ಣಗೊಳಿಸಲಾಗುತ್ತದೆ.
ಯೋಜನೆ ಮಾರ್ಗಸೂತ್ರಗಳ ಅನುಸಾರ, ಪ್ರೀಮಿಯಂ ಸಬ್ಸಿಡಿಯ ಸರ್ಕಾರಿ ಪಾಲಿನ ಅಂತಿಮ ಸ್ವೀಕೃತಿಗಾಗಿ ವಿಮಾ ಸಂಸ್ಥೆ ಕಾಯದೆ, ಆನ್‌ಅಕೌಂಟ್‌ಪಾವತಿಯನ್ನು ವಿಮಾ ಸಂಸ್ಥೆ ವಿತರಣೆ ಮಾಡುತ್ತದೆ.

ದಾವೆಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಗ್ರಾಹಕರು ನಮ್ಮ ಕಾಲ್‌ಸೆಂಟರ್‌ಸಂಖ್ಯೆ 1800 266 0700 ಗೆ ಕರೆ ಮಾಡಬಹುದು ಅಥವಾ care@hdfcergo.com ಗೆ ಇ-ಮೇಲ್ ಮಾಡಬಹುದು

---

7. ಒಂದು ವೇಳೆ ಬೆಳೆ ಕೊಯ್ಲಿನ ನಂತರವೂ ವಿಮಾ ಸುರಕ್ಷೆಗೆ ಒಳಪಟ್ಟಿದ್ದಲ್ಲಿ ಎಲ್ಲಿಯವರೆಗೆ ಸುರಕ್ಷೆ ನೀಡಲಾಗುತ್ತದೆ?

**ಕೊಯ್ಲು ನಂತರದ ನಷ್ಟಗಳು: ಆಲಿಕಲ್ಲು ಮಳೆ, ಚಂಡಮಾರುತ ಮತ್ತು ಚಂಡಮಾರುತ ಮಳೆಗಳು ಮತ್ತು ಅಕಾಲಿಕ ಮಳೆಗಳ ನಿರ್ದಿಷ್ಟ ಅಪಾಯಗಳ ವಿರುದ್ಧ ಕೊಯ್ಲು ಮಾಡಿದ ಬಳಿಕ ಒಣಗಿಸಲು ಗದ್ದೆಯಲ್ಲಿ ಕತ್ತರಿಸಿ ಹರಡಿರುವ ಬೆಳೆಗಳಿಗೆ ಕೊಯ್ಲಿನ ನಂತರ ಗರಿಷ್ಠ ಎರಡು ವಾರಗಳಿಗೆ ಮಾತ್ರ ವಿಮಾ ಸುರಕ್ಷೆ ಲಭ್ಯವಿರುತ್ತದೆ.**

**V. ಹೊಲದಲ್ಲಿ "ಕತ್ತರಿಸಿ ಹರಡಿರುವ" ಬೆಳೆಗೆ ಚಂಡಮಾರುತ ಮತ್ತು ಚಂಡಮಾರುತ ಮಳೆಗಳು ಮತ್ತು ದೇಶಾದ್ಯಂತ ಅಕಾಲಿಕ ಮಳೆಯಿಂದ ಆಗುವ ಹಾನಿ. ಒಣಗಿಸುವ ಸಲುವಾಗಿ ಕೊಯ್ಲು ಮಾಡಿದ ದಿನಾಂಕದಿಂದ ಗರಿಷ್ಠ ಎರಡು ವಾರಗಳವರೆಗೆ (14 ದಿನಗಳು)**

**VI. ಅರ್ಹತಾ ಮಾನದಂಡ: ಹಾನಿಗೆ ಮುಂಚೆ ಪ್ರೀಮಿಯಂ ಪಾವತಿಸಿರುವ/ ಅವರ ಖಾತೆಯಿಂದ ಪ್ರೀಮಿಯಂ ಮೊತ್ತ ಪಾವತಿಯಾಗಿರುವ ರೈತರು ಮಾತ್ರ ನಿರ್ದಿಷ್ಟ ವಿಪತ್ತುಗಳ ಕಾರಣದಿಂದ ಹಾನಿಯಾದಲ್ಲಿ, ಕೊಯ್ಲು ಮಾಡಿದ ನಂತರ 14 ದಿನಗಳವರೆಗೆ.**

**VII. ನಷ್ಟ ಮೌಲ್ಯಮಾಪನ ಪ್ರಕ್ರಿಯೆ:**

**ಹಾನಿಯ ನಂತರ 72 ಗಂಟೆಗಳ ಒಳಗೆ ರೈತರು ನಮ್ಮ ಕಾಲ್‌ಸೆಂಟರ್‌ಸಂಖ್ಯೆ 1800 266 0700 ಗೆ ಸೂಚನೆ ನೀಡಬೇಕು ಮತ್ತು ಸರ್ವೇ ನಂಬರ್‌ಆಧರಿತ ವಿಮೆ ಮಾಡಿಸಿದ ಬೆಳೆ ಮತ್ತು ಬಾಧಿತವಾದ ಎಕರೆವಾರು ಪ್ರದೇಶದ ವಿವರಗಳನ್ನು ಸೂಚನೆ ಒಳಗೊಂಡಿರಬೇಕು.**

**ದಾವೆಗಳ ಪಾವತಿಗೆ ಅಗತ್ಯವಿರುವ ಎಲ್ಲ ಸಂಬಂಧಿತ ದಾಖಲೆಗಳ ಜೊತೆ ಭರ್ತಿ ಮಾಡಿರುವ ದಾವೆ ನಮೂನೆಯನ್ನು ಸಹ ರೈತರು ನಂತರದಲ್ಲಿ ನೀಡಬೇಕು.**

ನಷ್ಟ ಮೌಲ್ಯಮಾಪಕರನ್ನು ನೇಮಕ ಮಾಡಲಾಗುತ್ತದೆ ಮತ್ತು ಮೌಲ್ಯಮಾಪನವನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುತ್ತದೆ, ಆನಂತರ ಯೋಜನೆಯ ಮಾರ್ಗಸೂತ್ರಗಳಿಗೆ ಅನುಸಾರ, ಪ್ರೀಮಿಯಂ ಸ್ವೀಕೃತಿಗೆ ಒಳಪಟ್ಟು, ನಷ್ಟ ಮೌಲ್ಯಮಾಪನ ವರದಿ ಅಂತಿಮಗೊಂಡ ಬಳಿಕ ದಾವೆಗಳನ್ನು ಇತ್ಯರ್ಥ ಮಾಡಲಾಗುತ್ತದೆ.

ದಾವೆಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಗ್ರಾಹಕರು ನಮ್ಮ ಕಾಲ್‌ಸೆಂಟರ್‌ಸಂಖ್ಯೆ 1800 266 0700 ಗೆ ಕರೆ ಮಾಡಬಹುದು ಅಥವಾ care@hdfcergo.com ಗೆ ಇ-ಮೇಲ್ ಮಾಡಬಹುದು

---

8. ಭೂಕುಸಿತ ಮತ್ತು ಆಲಿಕಲ್ಲು ಮಳೆಗೆ ವಿಮಾ ಸುರಕ್ಷೆ ನೀಡಲಾಗುತ್ತದೆಯೇ ಮತ್ತು ದಾವೆ ಮಾಡುವುದು ಹೇಗೆ?

**ಸ್ಥಳೀಯ ವಿಪತ್ತುಗಳು**: ಅಧಿಸೂಚಿತ ಪ್ರದೇಶದ ಪ್ರತ್ಯೇಕ ಹೊಲದಲ್ಲಿ ಬಾಧೆಯುಂಟುಮಾಡುವ ಆಲಿಕಲ್ಲು ಮಳೆ, ಭೂಕುಸಿತ, ಮುಳುಗಡೆ, ಮೇಘ ಸ್ಫೋಟ ಮತ್ತು ಸಿಡಿಲಿನಿಂದ ಉಂಟಾಗುವ ನೈಸರ್ಗಿಕ ಬೆಂಕಿಯ ಗುರುತಿಸಲ್ಪಟ್ಟ ಸ್ಥಳೀಯ ಆಪತ್ತುಗಳ ಸಂಭವಿಸುವಿಕೆಯಿಂದ ಉಂಟಾಗುವ ನಷ್ಟ/ ಹಾನಿ.

VIII. **ಒಂದು ವೇಳೆ ಅಧಿಸೂಚಿತ ಘಟಕದ ಭಾಗ ಅಥವಾ ಹೊಲವನ್ನು ಬಾಧಿಸುವ ಭೂಕುಸಿತ, ಆಲಿಕಲ್ಲು ಮಳೆ ಮತ್ತು ಮುಳುಗಡೆಯಂಥ ಸ್ಥಳೀಯ ಆಪತ್ತು/ ವಿಪತ್ತುಗಳಿಂದ ಬೆಳೆ ನಷ್ಟ ಉಂಟಾಗಿದ್ದರೆ ಸ್ಥಳೀಯ ವಿಪತ್ತು ದಾವೆ ಹೂಡಲು ರೈತ ಅರ್ಹನಾಗಿರುತ್ತಾನೆ.**

IX. **ಅರ್ಹತಾ ಮಾನದಂಡ**:
**ಹಾನಿಗೆ ಮುಂಚೆ ಪ್ರೀಮಿಯಂ ಪಾವತಿಸಿರುವ/ ಅವರ ಖಾತೆಯಿಂದ ಪ್ರೀಮಿಯಂ ಮೊತ್ತ ಪಾವತಿಯಾಗಿರುವ ರೈತರು ಮಾತ್ರ ದಾವೆ ಮಾಡಬಹುದು.**

**ಗಮನಿಸಿ: ವಿಮೆ ಮೊತ್ತಕ್ಕೆ ಒಳಪಟ್ಟು, ವಿಮೆ ಮಾಡಿಸಲ್ಪಟ್ಟ ಆಪತ್ತಿನವರೆಗೆ ಸಂಭವಿಸಿದ, ಅಗತ್ಯ ಸಾಮಗ್ರಿಗಳ ವೆಚ್ಚದ ಅನುಪಾತದಲ್ಲಿ ಗರಿಷ್ಠ ಪರಿಹಾರ ಇರುತ್ತದೆ.**

ಒಂದು ವೇಳೆ ಏರಿಯಾ ಅಪ್ರೋಚ್(ಸಿಸಿಇಗಳ ಡೇಟಾ ಆಧರಿಸಿ)ನಡಿ ಪರಿಹಾರ ಪಾವತಿ ಸ್ಥಳೀಯ ನಷ್ಟಗಳಿಗಿಂತ ಹೆಚ್ಚಿದ್ದಲ್ಲಿ, ಯೋಜನೆ ಮಾರ್ಗಸೂತ್ರಗಳ ಅನುಸಾರ, ಎರಡಕ್ಕಿಂತ ಹೆಚ್ಚಿನ ದಾವೆಗಳನ್ನು ವಿಮೆ ಮಾಡಿಸಿದ ರೈತರಿಗೆ, ಪ್ರೀಮಿಯಂ ಸಬ್ಸಿಡಿಯ ಸರ್ಕಾರಿ

ಪಾಲಿನ ಕನಿಷ್ಠ ಮುಂಗಡ ಸ್ವೀಕೃತಿಯ ಬಳಿಕವಷ್ಟೇ ಈ ಸುರಕ್ಷೆಯಡಿ ವಿಮಾ ಸಂಸ್ಥೆ ಪಾವತಿಯ ವಿತರಣೆಯನ್ನು ಮಾಡಬೇಕಿರುತ್ತದೆ.

x. **ನಷ್ಟ ಮೌಲ್ಯಮಾಪನ ಪ್ರಕ್ರಿಯೆ:**

**ಹಾನಿಯ ನಂತರ 72 ಗಂಟೆಗಳ ಒಳಗೆ ರೈತರು ನಮ್ಮ ಕಾಲ್‌ಸೆಂಟರ್‌ಸಂಖ್ಯೆ 1800 266 0700 ಗೆ ಸೂಚನೆ ನೀಡಬೇಕು ಮತ್ತು ಸರ್ವೇ ನಂಬರ್‌ಆಧರಿತ ವಿಮೆ ಮಾಡಿಸಿದ ಬೆಳೆ ಮತ್ತು ಬಾಧಿತವಾದ ಎಕರೆವಾರು ಪ್ರದೇಶದ ವಿವರಗಳನ್ನು ಸೂಚನೆ ಒಳಗೊಂಡಿರಬೇಕು.**
**ದಾವೆಗಳ ಪಾವತಿಗೆ ಅಗತ್ಯವಿರುವ ಎಲ್ಲ ಸಂಬಂಧಿತ ದಾಖಲೆಗಳ ಜೊತೆ ಭರ್ತಿ ಮಾಡಿರುವ ದಾವೆ ನಮೂನೆಯನ್ನು ಸಹ ರೈತರು ನಂತರದಲ್ಲಿ ನೀಡಬೇಕು.**
**ನಷ್ಟ ಮೌಲ್ಯಮಾಪಕರನ್ನು ನೇಮಕ ಮಾಡಲಾಗುತ್ತದೆ ಮತ್ತು ಮೌಲ್ಯಮಾಪನವನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುತ್ತದೆ, ಆನಂತರ ಯೋಜನೆಯ ಮಾರ್ಗಸೂತ್ರಗಳಿಗೆ ಅನುಸಾರ, ಪ್ರೀಮಿಯಂ ಸ್ವೀಕೃತಿಗೆ ಒಳಪಟ್ಟು, ನಷ್ಟ ಮೌಲ್ಯಮಾಪನ ವರದಿ ಅಂತಿಮಗೊಂಡ ಬಳಿಕ ದಾವೆಗಳನ್ನು ಇತ್ಯರ್ಥ ಮಾಡಲಾಗುತ್ತದೆ.**

ದಾವೆಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಗ್ರಾಹಕರು ನಮ್ಮ ಕಾಲ್‌ಸೆಂಟರ್‌ಸಂಖ್ಯೆ 1800 266 0700 ಗೆ ಕರೆ ಮಾಡಬಹುದು ಅಥವಾ care@hdfcergo.com ಗೆ ಇ-ಮೇಲ್ ಮಾಡಬಹುದು

ಗಮನಿಸಿ: ಯುದ್ಧ ಮತ್ತು ಅಣು ಆಪತ್ತುಗಳು, ದುರುದ್ದೇಶಪೂರಿತ ಹಾನಿ ಮತ್ತು ಇತರ ತಡೆಯಬಹುದಾದ ಅಪಾಯಗಳಿಂದ ಉಂಟಾಗುವ ನಷ್ಟಗಳನ್ನು ಹೊರತುಪಡಿಸಲಾಗುತ್ತದೆ.

---

9. ಈ ಯೋಜನೆಯಡಿ ಯಾವ ಬೆಳೆಗಳಿಗೆ ವಿಮಾ ಸುರಕ್ಷೆ ಮಾಡಿಸಬಹುದು?

a. ಆಹಾರ ಬೆಳೆಗಳು ಉದಾಹರಣೆಗೆ ಧಾನ್ಯಗಳು, ರಾಗಿ ಮತ್ತು ಬೇಳೆಕಾಳುಗಳು
b. ಎಣ್ಣೆಬೀಜಗಳು ಉದಾಹರಣೆಗೆ ನೆಲಗಡಲೆ
c. ವಾರ್ಷಿಕ ವಾಣಿಜ್ಯ/ ವಾರ್ಷಿಕ ತೋಟಗಾರಿಕಾ ಬೆಳೆಗಳು ಉದಾಹರಣೆಗೆ ಹಣ್ಣುಗಳು ಮತ್ತು ತರಕಾರಿಗಳು

ಇದರ ಜೊತೆಗೆ, ಇಳುವರಿ ಅಂದಾಜು ಮಾಡಲು ಪ್ರಮಾಣಿತ ವಿಧಾನ ಲಭ್ಯವಿರುವಂಥ ದೀರ್ಘಕಾಲಿಕ ತೋಟಗಾರಿಕಾ ಬೆಳೆಗಳಿಗೆ ಸುರಕ್ಷೆಗಾಗಿ ದೀರ್ಘಕಾಲಿಕ ಬೆಳೆಗಳ ಪ್ರಾಯೋಗಿಕ ಮಾದರಿಯನ್ನು ತೆಗೆದುಕೊಳ್ಳಬಹುದು.

HDFC ERGO General Insurance Company Limited. IRDAI Reg. No.146. CIN: U66030MH2007PLC177117. Registered & Corporate Office: 1st Floor, HDFC House, 165-166 Backbay Reclamation, H. T. Parekh Marg, Churchgate, Mumbai – 400 020. For more details on the risk factors, terms and conditions, please read the sales brochure/ prospectus before concluding the sale. Trade Logo displayed above belongs to HDFC Ltd and ERGO International AG and used by the Company under license. UIN: CSC - Pradhan Mantri Fasal Bima Yojana - HDE-AG-P18-25-V01-17-18, Pradhan Mantri Fasal Bima Yojana- IRDAN125P0003V01201617

10. ಸಾಮಾನ್ಯ ಪ್ರೀಮಿಯಂ ಸಬ್ಸಿಡಿ ಅನುಪಾತ ಎಷ್ಟಿರುತ್ತದೆ?

a. ವಿಮಾ ಗಣಿತದ ಪ್ರೀಮಿಯಂ ದರ ಮತ್ತು ರೈತರು ಪಾವತಿಸಬೇಕಾದ ಪ್ರೀಮಿಯಂ ದರಗಳ ವ್ಯತ್ಯಾಸವನ್ನು ಸಾಮಾನ್ಯ ಪ್ರೀಮಿಯಂ ಸಬ್ಸಿಡಿ ದರ ಎಂದು ಪರಿಗಣಿಸಲಾಗುತ್ತದೆ, ಇದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾನವಾಗಿ ಹಂಚಿಕೊಳ್ಳುತ್ತವೆ.
b. ಕೆಲವು ಸರ್ಕಾರಗಳು ನಿಗದಿತ ಸಬ್ಸಿಡಿಯ ಮೇಲೆ ಹೆಚ್ಚುವರಿ ಸಬ್ಸಿಡಿಯನ್ನು ಅವರ ನಿಯಮಗಳಿಗೆ ಅನುಸಾರ ಬಜೆಟ್ಮೂಲಕ ನೀಡುತ್ತವೆ ಮತ್ತು ರೈತರು ಇದಕ್ಕಾಗಿ ಸರ್ಕಾರಿ ವೆಬ್ಸೈಟ್ಪರಿಶೀಲಿಸಬಹುದು.

---

11. ಪಿಎಂಎಫ್ಬಿವೈ ನಡಿ ವಿಮಾ ಸುರಕ್ಷೆ ಪಡೆಯಲು ರೈತರಿಗೆ ಇರಬೇಕಾದ ಅರ್ಹತೆ ಏನು?

ಗೇಣಿದಾರರು ಮತ್ತು ಹೊಲ ಭೋಗ್ಯಕ್ಕೆ ಪಡೆದ ರೈತರು ಸೇರಿದಂತೆ ವಿಮಾ ಖಾತ್ರಿ ಹೊಂದಿರುವ ಎಲ್ಲ ರೈತರು ಸಹ ಈ ಯೋಜನೆಯಡಿ ವಿಮಾ ಸುರಕ್ಷೆ ಪಡೆಯಬಹುದು. ಮುಂದುವರಿದು, ವಿಮಾ ಸುರಕ್ಷೆ ಪಡೆದ ರೈತರನ್ನು ಎರಡು ಅಂಶಗಳಲ್ಲಿ ವಿಂಗಡಿಸಲಾಗುತ್ತದೆ:-

a. *ಕಡ್ಡಾಯ ಅಂಶ*

ಅಧಿಸೂಚಿತ ಬೆಳೆ(ಗಳಿ)ಗೆ ಆರ್ಥಿಕ ಸಂಸ್ಥೆಗಳಿಂದ (ಅಂದರೆ ಸಾಲಗಾರ ರೈತರು) ಋತುಮಾನದ ಕೃಷಿ ಕಾರ್ಯಾಚರಣೆಗಳ (ಎಸ್ಎಒ) ಸಾಲಗಳನ್ನು ಪಡೆಯುವ ಎಲ್ಲ ರೈತರಿಗೆ ಕಡ್ಡಾಯವಾಗಿ ವಿಮಾ ಸುರಕ್ಷೆ ಒದಗಿಸಲಾಗುತ್ತದೆ.

ಸಾಲ ಪಡೆದಿರುವ ಎಲ್ಲ ಬೇಸಾಯಗಾರರು ಯೋಜನೆಯ ನಿಯಮಗಳ ಅನುಸಾರ ವಿಮಾ ಸುರಕ್ಷೆಗೆ ಒತ್ತಾಯಿಸುವುದು ಕಡ್ಡಾಯವಾಗಿರುತ್ತದೆ.

- ✓ ಬೆಳೆ ಯೋಜನೆಯಲ್ಲಿ ಯಾವುದೇ ಬದಲಾವಣೆಯನ್ನು ಬಿತ್ತನೆ ಮಾಡಿದ ಒಂದು ವಾರ ಒಳಗೆ ಬ್ಯಾಂಕ್ಗಮನಕ್ಕೆ ತರಬೇಕು.
- ✓ ಎಸ್ಎಲ್ಸಿಸಿಸಿಯಿಂದ ಘೋಷಿಸಿರುವ ನಿರ್ದಿಷ್ಟ ಕಟ್-ಆಫ್ದಿನಾಂಕದವರೆಗೆ ಮಾತ್ರ ವಿಮಾ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತದೆ.

b. *ಐಚ್ಛಿಕ ಅಂಶ*

ಸಾಲಗಾರರಲ್ಲದ ರೈತರಿಗೆ ಯೋಜನೆ ಐಚ್ಛಿಕವಾಗಿರುತ್ತದೆ ಮತ್ತು ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಯಾವುದೇ ಅಧಿಸೂಚಿತ ಬೆಳೆಗೆ ಪಿಎಂಎಫ್ಬಿವೈ ಅಡಿಯಲ್ಲಿ ವಿಮೆ ಪಡೆಯಲು ಬಯಸುವ ಬೇಸಾಯಗಾರರು ಕಟ್ಆಫ್ದಿನಾಂಕದ ಒಳಗೆ ಸಮೀಪದ ಬ್ಯಾಂಕ್ ಶಾಖೆ/ ಪಿಎಸಿಎಸ್/ ಅಧಿಕೃತ ಮಾಧ್ಯಮ ಸಹಭಾಗಿ/ ವಿಮಾ

HDFC ERGO General Insurance Company Limited. IRDAI Reg. No.146. CIN: U66030MH2007PLC177117. Registered & Corporate Office: 1st Floor, HDFC House, 165-166 Backbay Reclamation, H. T. Parekh Marg, Churchgate, Mumbai – 400 020. For more details on the risk factors, terms and conditions, please read the sales brochure/ prospectus before concluding the sale. Trade Logo displayed above belongs to HDFC Ltd and ERGO International AG and used by the Company under license. UIN: CSC - Pradhan Mantri Fasal Bima Yojana - HDE-AG-P18-25-V01-17-18, Pradhan Mantri Fasal Bima Yojana- IRDAN125P0003V01201617

ಸಂಸ್ಥೆಯ ವಿಮಾ ಮಧ್ಯವರ್ತಿಯನ್ನು ಸಂಪರ್ಕಿಸಿ, ಸೂಚಿಸಿದ ಮಾದರಿಯಲ್ಲಿ ಪ್ರಸ್ತಾವನೆ ನಮೂನೆಯನ್ನು ಭರ್ತಿ ಮಾಡಿ, ವಿಮೆಗೆ ಪ್ರಸ್ತಾವಿಸಿರುವ ಕೃಷಿ ಭೂಮಿ/ ಬೆಳೆಗೆ ಸಂಬಂಧಿಸಿದ ವಿಮಾ ಖಾತ್ರಿಯ ಅಗತ್ಯ ದಾಖಲೆಗಳೊಂದಿಗೆ (ಉದಾಹರಣೆಗೆ ಮಾಲೀಕತ್ವ/ ಭೋಗ್ಯ/ ಬೇಸಾಯದ ಹಕ್ಕುಗಳು) ಬ್ಯಾಂಕ್‌ಶಾಖೆ/ ವಿಮಾ ಮಧ್ಯವರ್ತಿ/ ಸಿಎಸ್‌ಸಿ ಕೇಂದ್ರಗಳಿಗೆ ನಮೂನೆ ಮತ್ತು ಪ್ರೀಮಿಯಂ ರೇವಣಿಯನ್ನು ಸಲ್ಲಿಸಬಹುದು.

- ✓ ಬೆಳೆ ಯೋಜನೆಯಲ್ಲಿ ಯಾವುದೇ ಬದಲಾವಣೆಯನ್ನು ಬಿತ್ತನೆ ಮಾಡಿದ ಒಂದು ವಾರ ಒಳಗೆ ಬ್ಯಾಂಕ್‌ಗಮನಕ್ಕೆ ತರಬೇಕು.
- ✓ ಎಸ್‌ಎಲ್‌ಸಿಸಿಸಿಯಿಂದ ಘೋಷಿಸಿರುವ ನಿರ್ದಿಷ್ಟ ಕಟ್-ಆಫ್‌ದಿನಾಂಕದವರೆಗೆ ಮಾತ್ರ ವಿಮಾ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತದೆ.

- ✓ ವಿಮಾ ಸುರಕ್ಷೆ ಬಯಸುವ ರೈತರು ನಿಯೋಜಿತ ಬ್ಯಾಂಕ್‌ನ ಶಾಖೆಯಲ್ಲಿ ಒಂದು ಖಾತೆಯನ್ನು ತೆರೆಯಬೇಕು/ ವಹಿವಾಟು ನಡೆಸಬೇಕು, ಮತ್ತು ವಿವರಗಳನ್ನು ಪ್ರಸ್ತಾವನೆ ನಮೂನೆಯಲ್ಲಿ ಒದಗಿಸಬೇಕು.

- ✓ ರೈತರು ತಮ್ಮ ಭೂಮಿ ಗುರುತು ಸಂಖ್ಯೆಯನ್ನು ಪ್ರಸ್ತಾವನೆಯಲ್ಲಿ ನಮೂದಿಸಬೇಕು ಮತ್ತು ಬೇಸಾಯದ ಭೂಮಿಯ ಸ್ವಾಮ್ಯಕ್ಕೆ ಸಂಬಂಧಿಸಿ ದಾಖಲೆ ಸಾಕ್ಷ್ಯವನ್ನು ಕಡ್ಡಾಯವಾಗಿ ಒದಗಿಸಬೇಕು. ಬಿತ್ತನೆ ಮಾಡಿದ ಪ್ರದೇಶದ ದೃಢೀಕರಣ ಪ್ರಮಾಣಪತ್ರವನ್ನು ಬೇಸಾಯಗಾರರು ಕಡ್ಡಾಯವಾಗಿ ಒದಗಿಸಬೇಕು.

- ✓ ರೈತರು ಒಂದು ಹೊಲಕ್ಕೆ ಕೇವಲ ಒಂದು ಮೂಲದಿಂದ ಮಾತ್ರ, ಬೆಳೆದಿರುವ / ಬೆಳೆಯುವ ಪ್ರಸ್ತಾವನೆ ಮಾಡಿರುವ ಅಧಿಸೂಚಿತ ಬೆಳೆಗೆ ವಿಮಾ ಸುರಕ್ಷೆ ಪಡೆಯುವುನ್ನು ಖಾತ್ರಿಪಡಿಸಿಕೊಳ್ಳಬೇಕು. ಯಾವುದೇ ನಕಲು ಅಥವಾ ಎರಡು ವಿಮೆಗೆ ಅವಕಾಶ ಇರುವುದಿಲ್ಲ ಮತ್ತು ಅಂಥ ಪ್ರಕರಣಗಳಲ್ಲಿ ರೈತರು ವಿಮಾ ಸುರಕ್ಷೆಗೆ ಅರ್ಹರಿರುವುದಿಲ್ಲ. ಅಂಥ ಎಲ್ಲ ದಾವೆಗಳನ್ನು ತಿರಸ್ಕರಿಸುವ ಹಕ್ಕನ್ನು ವಿಮಾ ಸಂಸ್ಥೆ ಕಾಯ್ದಿರಿಸಿಕೊಂಡಿರುತ್ತದೆ ಮತ್ತು ಅಂಥ ಪ್ರಕರಣಗಳಲ್ಲಿ ಪ್ರೀಮಿಯಂ ಅನ್ನು ಕೂಡ ಮರುಪಾವತಿಸುವುದಿಲ್ಲ.
- ✓ ಅಂಥ ರೈತರ ವಿರುದ್ಧ ಸಂಸ್ಥೆ ಕಾನೂನು ಕ್ರಮವನ್ನು ಕೂಡ ಕೈಗೊಳ್ಳಬಹುದು.

ಎಸ್‌ಸಿ/ ಎಸ್‌ಟಿಯಡಿ ಗರಿಷ್ಠ ರೈತರಿಗೆ ಮತ್ತು ಈ ಎರಡೂ ಅಂಶಗಳಡಿ ಮಹಿಳಾ ರೈತರಿಗೆ ವಿಮಾ ಸುರಕ್ಷೆ ನೀಡುವ ಉದ್ದೇಶವನ್ನೂ ಸಹ ಯೋಜನೆ ಹೊಂದಿದೆ.

---

12. ಬೆಳೆಗಳಿಗೆ ಸಿಗುವ ವಿಮಾ ಸುರಕ್ಷೆ ಪ್ರಮಾಣ ಎಷ್ಟಿರುತ್ತದೆ?

ಬೆಳೆ ಮೌಲ್ಯದ 100% ನಷ್ಟ ವಿಮಾ ಸುರಕ್ಷೆಯನ್ನು ಒದಗಿಸುವುದಿಲ್ಲ. ವಿಮೆಯ ಮೊತ್ತ ಬೆಳೆ ಬೆಳೆಯುವ ಸಾಮಗ್ರಿ ವೆಚ್ಚವನ್ನು ಆಧರಿಸಿರುತ್ತದೆ. ನಂತರ ಬೆಳೆಯ ಅಪಾಯವನ್ನು ಆಧರಿಸಿ ನಷ್ಟ ಪರಿಹಾರದ ಮಟ್ಟವನ್ನು ಜಿಲ್ಲಾ ಮಟ್ಟದಲ್ಲಿ ಮತ್ತು ಬೆಳೆ ಮಟ್ಟದಲ್ಲಿ ಅಧಿಕ ಅಪಾಯಕ್ಕೆ 70%, ಮಧ್ಯಮ ಅಪಾಯಕ್ಕೆ 80% ಮತ್ತು ಕಡಿಮೆ ಅಪಾಯಕ್ಕೆ 90% ನಂತೆ ವಿವಿಧ ಮಟ್ಟಗಳಲ್ಲಿ ನಿಗದಿಪಡಿಸಲಾಗುತ್ತದೆ. ರಾಜ್ಯದಲ್ಲಿ ರಾಜ್ಯಮಟ್ಟದ ಬೆಳೆ ಸಮನ್ವಯ ಸಮಿತಿ, ಹಣಕಾಸಿನ ಸಂಬಂಧಿತ ಪ್ರಮಾಣ ಮತ್ತು ಅಧಿಸೂಚಿತ ಬೆಳೆಗೆ ನಷ್ಟ ಪರಿಹಾರ ಮಟ್ಟ ಮತ್ತು ರಾಜ್ಯಗಳಲ್ಲಿ

ಟೆಂಡರ್‌ಪ್ರಕ್ರಿಯೆಗೆ ಮುನ್ನ ಪ್ರದೇಶಗಳನ್ನು ಅನುಮೋದಿಸುತ್ತದೆ. ಆದ್ದರಿಂದ, ರೈತರಿಗೆ ನೀಡಲಾಗುವ ವಿಮಾ ಸುರಕ್ಷೆ ರಾಜ್ಯ ಮಟ್ಟದ ಬೆಳೆ ಸಮನ್ವಯ ಸಮಿತಿ ಘೋಷಿಸಿದ ಅಂತಿಮ ಮೊತ್ತವನ್ನು ಆಧರಿಸಿರುತ್ತದೆ.

---

13. ಪಿಎಂಎಫ್‌ಬಿವೈ ನೋಂದಣಿಗೆ ಯಾವುದಾದರೂ ಕಾಲಮಿತಿ ಇದೆಯೇ?

ಸಂಬಂಧಿತ ರಾಜ್ಯ ಸರ್ಕಾರದ ಅಧಿಸೂಚನೆಯಲ್ಲಿ ವಿವರಿಸಿರುವ ಕಟ್‌ಆಫ್ ದಿನಾಂಕದ ಒಳಗೆ ಎಲ್ಲ ನೋಂದಣಿಗಳನ್ನು ಪೂರ್ಣಗೊಳಿಸುವ ಅಗತ್ಯವಿರುತ್ತದೆ ಮತ್ತು ವಿಮಾ ಸಂಸ್ಥೆಯ ಕಟ್‌ಆಫ್ ದಿನಾಂಕದ ಒಳಗೆ ರೈತರು ಪಾವತಿಸಬೇಕಿರುವ ಪ್ರೀಮಿಯಂ ಭಾಗವನ್ನು ಬ್ಯಾಂಕ್‌ಅಥವಾ ಮಧ್ಯವರ್ತಿಯಿಂದ ಪಾವತಿಸಬೇಕು. ಒಂದು ವೇಳೆ ಕಟ್‌ಆಫ್ ದಿನಾಂಕಗಳನ್ನು ಮೀರಿ ಯಾವುದಾದರೂ ವಿಳಂಬಗಳು ಇದ್ದಲ್ಲಿ ವಿಮಾ ಸಂಸ್ಥೆ , ವಿಮಾ ಸುರಕ್ಷೆಯನ್ನು ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ.

---

14. ಪಿಎಂಎಫ್‌ಬಿವೈ ಯೋಜನೆ ಅನುಷ್ಠಾನದ ಉದ್ದೇಶ ಏನು?

ಪಿಎಂಎಫ್‌ಬಿವೈ ಒಂದು ಅಪಾಯ ತಡೆಗಟ್ಟುವಿಕೆ ಸಾಧನವಾಗಿದ್ದು ಆರ್ಥಿಕ ನೆರವು ನೀಡುವ ಮತ್ತು ರೈತರು ಬೇಸಾಯ ಮುಂದುವರಿಸುವುದನ್ನು ಖಾತ್ರಿಪಡಿಸಲು ರೈತರ ಆದಾಯವನ್ನು ಸ್ಥಿರಗೊಳಿಸುವ ಉದ್ದೇಶ ಹೊಂದಿದೆ. ಇದು ಎಲ್ಲ ಹಂತಗಳಲ್ಲಿ, ಅಂದರೆ ಬಿತ್ತನೆಯಿಂದ ಕೊಯ್ಲಿನವರೆಗೆ ಅನಿರೀಕ್ಷಿತ ಘಟನೆಗಳಿಂದ ಉಂಟಾಗುವ ಬೆಳೆ ಆಪತ್ತುಗಳಿಗೆ ವಿಮಾ ಸುರಕ್ಷೆ ಒದಗಿಸುತ್ತದೆ. ಕೃಷಿ ವಲಯದಲ್ಲಿ ಸ್ಥಿರ ಆದಾಯ ಮತ್ತು ಸಮರ್ಥ ಉತ್ಪಾದನೆಯನ್ನು ಪಡೆಯಲು ಆಧುನಿಕ ಮತ್ತು ವಿನೂತನ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಹ ರೈತರನ್ನು ಉತ್ತೇಜಿಸುತ್ತದೆ.

---

15. ವೈಯಕ್ತಿಕ ರೈತರಿಗೆ ವಿಮೆ ಮೊತ್ತದ ಮಿತಿ ಎಷ್ಟು?

HDFC ERGO General Insurance Company Limited. IRDAI Reg. No.146. CIN: U66030MH2007PLC177117. Registered & Corporate Office: 1st Floor, HDFC House, 165-166 Backbay Reclamation, H. T. Parekh Marg, Churchgate, Mumbai – 400 020. For more details on the risk factors, terms and conditions, please read the sales brochure/ prospectus before concluding the sale. Trade Logo displayed above belongs to HDFC Ltd and ERGO International AG and used by the Company under license. UIN: CSC - Pradhan Mantri Fasal Bima Yojana - HDE-AG-P18-25-V01-17-18, Pradhan Mantri Fasal Bima Yojana- IRDAN125P0003V01201617

ವಿಮೆಗಾಗಿ ರೈತರು ಬೆಳೆಯುವ ಅಧಿಸೂಚಿತ ಬೆಳೆಯ ಪ್ರದೇಶದಿಂದ ಗುಣಿಸಲ್ಪಟ್ಟ ಪ್ರತಿ ಹೆಕ್ಟೇರ್‌ಹಣಕಾಸಿನ ಪ್ರಮಾಣಕ್ಕೆ ವೈಯಕ್ತಿಕ ರೈತರ ವಿಮೆಯ ಮೊತ್ತ ಸಮನಾಗಿರುತ್ತದೆ. ಎಚ್‌ಡಿಎಫ್‌ಸಿ ಎರ್ಗೋಗೆ 2019ರ ಮುಂಗಾರು ಕೃಷಿಯ ವಿವಿಧ ಬೆಳೆಗಳಿಗೆ ರಾಜ್ಯಗಳಲ್ಲಿ ಹಂಚಿಕೆ ಮಾಡಿದ ವಿಮೆ ಮೊತ್ತವನ್ನು ಸಂಬಂಧಿತ ರಾಜ್ಯಗಳ ವಿಭಾಗದಲ್ಲಿ ನೋಡಬಹುದು.

---

16. ರೈತರಿಗೆ ದಾವೆಗಳ ಇತ್ಯರ್ಥದ ಆಧಾರ ಯಾವುದು?

ಒಂದು ವಿಮಾ ಘಟಕದಲ್ಲಿ ವಿಮೆ ಮಾಡಿಸಿಕೊಂಡಿರುವ ಎಲ್ಲ ರೈತರಿಗೆ ನೀಡಲಾಗುವ ವಿಮಾ ಸುರಕ್ಷೆಗೆ ಇಳುವರಿ ಮಿತಿ (ಟಿವೈ) ಮಾನದಂಡ ಇಳುವರಿ ಪ್ರಮಾಣವಾಗಿರುತ್ತದೆ. ಒಂದು ವಿಮಾ ಘಟಕದಲ್ಲಿ (ಐಯು) ಅಧಿಸೂಚಿತ ಬೆಳೆಯ ಸರಾಸರಿ ಇಳುವರಿ ಕಳೆದ ಏಳು ವರ್ಷಗಳಲ್ಲಿ ಅತ್ಯುತ್ತಮ ಐದು ವರ್ಷಗಳ ಸರಾಸರಿ ಇಳುವರಿಯಾಗಿರುತ್ತದೆ. ಅಧಿಸೂಚಿತ ಬೆಳೆಯ ಇಳುವರಿ ಮಿತಿ ನಷ್ಟಪರಿಹಾರ ಮಟ್ಟದಿಂದ ಗುಣಿಸಲ್ಪಟ್ಟ ಸರಾಸರಿ ಇಳುವರಿಗೆ ಸಮನಾಗಿರುತ್ತದೆ.

---

17. ಈ ಯೋಜನೆಯ ಅನುಷ್ಠಾನಕ್ಕೆ ರಾಜ್ಯದ ಪೂರ್ವಷರತ್ತುಗಳು ಏನು?

a. ಇಳಿಕೆ ಪ್ರಮಾಣ ಆಧಾರದಲ್ಲಿ ಅಧಿಸೂಚಿತ ವಿಮಾ ಘಟಕದಲ್ಲಿ ಅಗತ್ಯ ಸಂಖ್ಯೆಯ ಬೆಳೆ ಕಟಾವು ಪ್ರಯೋಗಗಳನ್ನು (ಸಿಸಿಇಗಳು) ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳು ನಡೆಸಬೇಕು.

b. ನಿಗದಿತ ಕಾಲಮಿತಿಯೊಳಗೆ, ಅಂದರೆ ಅಂತಿಮ ಕೊಯ್ಲಿನ ದಿನಾಂಕದಿಂದ ಒಂದು ತಿಂಗಳ ಒಳಗೆ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳು ಸಿಸಿಇ ಆಧರಿತ ಇಳುವರಿ ಡೇಟಾವನ್ನು ವಿಮಾ ಸಂಸ್ಥೆಗಳಿಗೆ ಸಲ್ಲಿಸಬೇಕು.

c. ಆನ್‌ಅಕೌಂಟ್‌ಪಾವತಿ ಇತ್ಯರ್ಥದ ಉದ್ದೇಶಕ್ಕಾಗಿ ಸ್ವಯಂಚಾಲಿತ ಹವಾಮಾನ ಕೇಂದ್ರದ ಜಾಲದ ಬಲಪಡಿಸುವಿಕೆಯನ್ನು ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳು ಕಲ್ಪಿಸಬೇಕು.

d. ಸಿಸಿಇ ನಡೆಸಲು ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು.

18. ಸಾಲಗಾರ ರೈತರಿಂದ ಪ್ರಸ್ತಾವನೆ ಮತ್ತು ಪ್ರೀಮಿಯಂ ಸಂಗ್ರಹ ಪ್ರಕ್ರಿಯೆ ಹೇಗೆ?

a. ಕಡ್ಡಾಯ ಅಂಶದಡಿ ಸಾಲಗಾರರು - ಆರ್ಥಿಕ ಸಂಸ್ಥೆಗಳು

ಬೆಳೆಗಳ ಋತು ಪರಿಗಣಿಸಿ, ಹಣಕಾಸಿನ ಪ್ರಮಾಣ ಮತ್ತು ಅಧಿಸೂಚಿತ ಬೆಳೆಗಳಡಿ ವೈಯಕ್ತಿಕ ಸಾಲಗಾರ ರೈತರ ಘೋಷಿತ ಎಕರೆ ಪ್ರಮಾಣ ಆಧರಿಸಿ ಮುಂಗಾರು ಮತ್ತು ಹಿಂಗಾರು ಋತು ಎರಡಕ್ಕೂ ಸಾಲದ ಮೊತ್ತದ ಅರ್ಹತೆಯನ್ನು ಬ್ಯಾಂಕುಗಳು ಪ್ರತ್ಯೇಕವಾಗಿ ಲೆಕ್ಕಾಚಾರ ಮಾಡಬೇಕು ಮತ್ತು ಕಡ್ಡಾಯ ವಿಮಾ ಸುರಕ್ಷೆಗಾಗಿ ಪರಿಗಣಿಸಬೇಕು.

ಕಿಸಾನ್‌ಕ್ರೆಡಿಟ್‌ಕಾರ್ಡ್ (ಕೆಸಿಸಿ) ನಡಿಯ ಬೆಳೆ ಸಾಲಗಳಿಗೂ ಕೂಡ ಬ್ಯಾಂಕ್‌ಗಳ ಮೂಲಕ ಕಡ್ಡಾಯ ವಿಮೆ ಸುರಕ್ಷೆ ನೀಡಲಾಗುತ್ತದೆ ಮತ್ತು ಈ ಯೋಜನೆಯ ಅನುಸರಣೆಗೆ ಸಂಬಂಧಿಸಿ ಎಲ್ಲ ದಾಖಲೆಗಳನ್ನು ಇರಿಸಿಕೊಳ್ಳಬೇಕು.

ಸಾಲಗಾರ ರೈತರ ಪ್ರಸ್ತಾವನೆ ಮತ್ತು ಪ್ರೀಮಿಯಂ ಸಂಗ್ರಹಕ್ಕೆ ನೋಡಲ್‌ಬ್ಯಾಂಕ್‌ಜವಾಬ್ದಾರಿಯಾಗಿರುತ್ತದೆ.

ವಾಣಿಜ್ಯ ಬ್ಯಾಂಕ್‌ಗಳು/ ಆರ್‌ಆರ್‌ಬಿಗಳ ವೈಯಕ್ತಿಕ ಬ್ಯಾಂಕ್‌ಶಾಖೆಗಳು ನೋಡಲ್‌ಶಾಖೆಗಳಂತೆ ಕಾರ್ಯ ನಿರ್ವಹಿಸುತ್ತವೆ. ಸಂಬಂಧಿತ ಬ್ಯಾಂಕ್‌ಶಾಖೆಗಳಿಗೆ ಅಗತ್ಯ ಮಾರ್ಗಸೂತ್ರಗಳನ್ನು ಸಂಬಂಧಿತ ಮುಖ್ಯ ಬ್ಯಾಂಕ್‌ಮತ್ತು ವಾಣಿಜ್ಯ ಬ್ಯಾಂಕ್‌ಗಳು/ ಆರ್‌ಆರ್‌ಬಿಗಳ ಪ್ರಾದೇಶಿಕ ಕಚೇರಿಗಳು/ ಆಡಳಿತ ಕಚೇರಿಗಳು ಜಾರಿ ಮಾಡುತ್ತವೆ.

ನೋಡಲ್‌ಬ್ಯಾಂಕ್‌ಗಳು/ ಶಾಖೆಗಳಿಂದ ಸಲ್ಲಿಸಲ್ಪಟ್ಟ ಘೋಷಣಾಪತ್ರ, ಬೆಳೆ ವಿಮೆ ಪೋರ್ಟಲ್‌ನಿಗದಿಪಡಿಸಿರುವ/ ಒದಗಿಸಿರುವ ನಮೂನೆಯಂತೆ ವಿಮಾ ಘಟಕ, ಪ್ರತಿ ಘಟಕಕ್ಕೆ ವಿಮೆಯ ಮೊತ್ತ, ಪ್ರತಿ ಘಟಕಕ್ಕೆ ಪ್ರೀಮಿಯಂ, ವಿಮೆ ಮಾಡಿಸಿರುವ ಒಟ್ಟಾರೆ ಪ್ರದೇಶ, ಮತ್ತು ವಿಮಾ ಸುರಕ್ಷೆ ನೀಡಿದ ರೈತರ ವಿಭಾಗ (ಸಣ್ಣ ಮತ್ತು ಮಧ್ಯಮ ಅಥವಾ ಇತರೇ) ಮತ್ತು ಇತರ ವಿಭಾಗಗಳಲ್ಲಿ (ಎಸ್‌ಸಿ/ ಎಸ್‌ಟಿ/ ಇತರೇ) ಇರುವ ರೈತರ / ಮಹಿಳೆಯರ ಸಂಖ್ಯೆ ಅವರ ಬ್ಯಾಂಕ್‌ಖಾತೆ ವಿವರಗಳು ಇತ್ಯಾದಿ (ಬ್ಯಾಂಕ್/ ಅವುಗಳ ಶಾಖೆಗಳು) ಮುಂತಾದ ವಿವರಗಳನ್ನು ಒಳಗೊಂಡಿರಬೇಕು.

ವಾಣಿಜ್ಯ ಬ್ಯಾಂಕ್‌ಗಳು / ಆರ್‌ಆರ್‌ಬಿಗಳು ನಿಗದಿತ ಕಾಲಮಿತಿಯ ಒಳಗೆ ಬೆಳೆ ವಿಮೆ ಪೋರ್ಟಲ್‌ಗಳು ಜಾರಿ ಮಾಡಿದ ನಮೂನೆಯಲ್ಲಿ ವಿಮೆ ಪಡೆದ ರೈತರ ವಿವರಗಳ ಜೊತೆ ಕ್ರೋಢೀಕರಿಸಿದ ಪ್ರಸ್ತಾವನೆಗಳನ್ನು ನೇರವಾಗಿ ಸಲ್ಲಿಸುತ್ತವೆ.

ನೋಡಲ್‌ಬ್ಯಾಂಕ್‌ಗಳು / ಮಧ್ಯವರ್ತಿಗಳು ರೈತರ ಹೆಸರು, ಬ್ಯಾಂಕ್‌ಖಾತೆ ಸಂಖ್ಯೆ, ಗ್ರಾಮ, ರೈತರ ವಿಭಾಗ, ಎಕರೆವಾರು ಪ್ರದೇಶ, ಬೆಳೆ, ವಿಮೆಯ ಮೊತ್ತ, ಸಂಗ್ರಹಿಸಿದ ಪ್ರೀಮಿಯಂ, ಸರ್ಕಾರಿ ಸಬ್ಸಿಡಿ ಇತ್ಯಾದಿ ಅಗತ್ಯ ವಿವರಗಳ ಜೊತೆ ವೈಯಕ್ತಿಕ ರೈತರ ಪಟ್ಟಿಯನ್ನು ಸಂಬಂಧಿಸಿದ ಶಾಖೆಗಳಿಂದ ಸಾಫ್ಟ್‌ಕಾಪಿಯಲ್ಲಿ ಸಂಗ್ರಹಿಸಬೇಕು ಮತ್ತು ಅದನ್ನು ಅಂತಿಮ ಕಟ್‌ಆಫ್‌ದಿನಾಂಕಗಳ 15 ದಿನಗಳ ಒಳಗೆ ಘೋಷಣೆಯೊಂದಿಗೆ ವಿಮಾ ಸಂಸ್ಥೆಗೆ ಕಳಿಸಿಕೊಡಬೇಕು.

---

19. ಸಾಲಗಾರರಲ್ಲದ ರೈತರಿಂದ ಪ್ರಸ್ತಾವನೆ ಮತ್ತು ಪ್ರೀಮಿಯಂ ಸಂಗ್ರಹ ಪ್ರಕ್ರಿಯೆ ಹೇಗೆ?

a. ಐಚ್ಛಿಕ ಅಂಶದಡಿ ಸಾಲಗಾರರದಲ್ಲದ ರೈತರು – ಮಾಧ್ಯಮ ಸಹಭಾಗಿ/ ಮಧ್ಯವರ್ತಿಗಳು

ಎಸ್‌ಒಎ ಸಾಲ ಪಡೆಯದ ಮತ್ತು ವಿಮಾ ಖಾತ್ರಿ ಹೊಂದಿರುವ ಎಲ್ಲ ರೈತರು ಸಮೀಪದ ವಾಣಿಜ್ಯ ಬ್ಯಾಂಕ್‌ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್(ಆರ್‌ಆರ್‌ಬಿ) ಅಥವಾ ಪಿಎಸಿಎಸ್(ಡಿಸಿಸಿಬಿ) ಶಾಖೆಗೆ ಭೇಟಿ ನೀಡುವ ಮೂಲಕ ವಿಮಾ ಸುರಕ್ಷೆ ಪಡೆಯಬಹುದು. ಪ್ರಸ್ತಾವನೆ ನಮೂನೆ ಭರ್ತಿ ಮಾಡುವಿಕೆ, ಸಂಬಂಧಿತ ದಾಖಲೆಗಳು, ವಿಮೆಯ ಮೊತ್ತ ಮತ್ತು ಅನ್ವಯವಾಗುವ ಪ್ರೀಮಿಯಂ ಇತ್ಯಾದಿಗಳಿಗೆ ಸಂಬಂಧಿಸಿ ಬ್ಯಾಂಕ್‌ಅಧಿಕಾರಿಗಳು ರೈತರಿಗೆ ನೆರವು ಮತ್ತು ಮಾರ್ಗದರ್ಶನ ನೀಡುತ್ತಾರೆ. ಅಂಥ ಪ್ರಕರಣಗಳಲ್ಲಿ ಬ್ಯಾಂಕ್‌ಖಾತೆಯಲ್ಲಿ ವ್ಯವಹರಿಸುವುದು ಅಗತ್ಯವಾಗಿರುತ್ತದೆ.

ಎಸ್‌ಒಎ ಸಾಲ ಪಡೆಯದ ಮತ್ತು ವಿಮಾ ಖಾತ್ರಿ ಹೊಂದಿರುವ ಎಲ್ಲ ರೈತರು, ಪ್ರಸ್ತಾವನೆಯನ್ನು ಭರ್ತಿ ಮಾಡುವ ಮತ್ತು ಅಗತ್ಯ ಪ್ರೀಮಿಯಂನ ಜೊತೆ ಅಗತ್ಯ ದಾಖಲೆಗಳನ್ನು ಒದಗಿಸುವ ಮೂಲಕ ಸಹ ವಿಮಾ ಸುರಕ್ಷೆ ಪಡೆಯಬಹುದು ಮತ್ತು ಅದನ್ನು ಐಆರ್‌ಡಿಎ ಮಧ್ಯವರ್ತಿಗಳಿಂದ ಅನುಮೋದಿತ ಮತ್ತು ನಿಯೋಜಿತರಿಗೆ ಅದನ್ನು ಸಲ್ಲಿಸಬಹುದು. ನಿಯೋಜಿತ ಮಧ್ಯವರ್ತಿಗಳು ಭೂ ದಾಖಲೆಗಳು, **7/12** ಎಕ್ಸ್ ಟ್ರಾಕ್ಟ್ ಅಥವಾ ಭೂ ಹಕ್ಕುಗಳ ದಾಖಲೆ, ಬಿತ್ತನೆ ಪ್ರಮಾಣಪತ್ರ, ಗುರುತಿನ ದಾಖಲೆ, ಬ್ಯಾಂಕ್‌ಪಾಸ್‌ಬುಕ್, ರದ್ದುಪಡಿಸಿದ ಚೆಕ್‌ಅಗತ್ಯವಿರುವ ಫೋಟೋ ಐಡಿ ಬ್ಯಾಂಕ್ ಪಾಸ್‌ಬುಕ್‌ನಲ್ಲಿ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಮತ್ತು ಒಂದು ವೇಳೆ ಗೇಣಿದಾರರು ಅಥವಾ ಭೂಮಿ ಭೋಗ್ಯಕ್ಕೆ ಪಡೆದ ರೈತರಾಗಿದ್ದಲ್ಲಿ ಅನ್ವಯವಾಗುವ ಕರಾರು/ ಒಪ್ಪಂದಕ್ಕೆ ಸಂಬಂಧಿಸಿದ ವಿಮಾ ಖಾತ್ರಿ ಮತ್ತು ಸಂಬಂಧಿತ ದಾಖಲೆಗಳನ್ನು ಪರಿಶೀಲಿಸುತ್ತಾರೆ. ಮಧ್ಯವರ್ತಿಗಳು ಅವಶ್ಯಕ

ಪ್ರೀಮಿಯಂ ಸಂಗ್ರಹಿಸುತ್ತಾರೆ ಮತ್ತು ಸಲ್ಲಿಸುತ್ತಾರೆ ಮತ್ತು ವೈಯಕ್ತಿಕ/ ಕ್ರೋಢೀಕೃತ ಪ್ರೀಮಿಯಂ ಅನ್ನು ವೈಯಕ್ತಿಕ ಪ್ರಸ್ತಾವನೆ ನಮೂನೆಗಳು ಮತ್ತು ಘೋಷಣೆ/ ಲಿಸ್ಟಿಂಗ್‌ಶೀಟ್ (ಎಂಐಎಸ್) ನಲ್ಲಿ ಸಾರಾಂಶ ವಿವರಗಳ ಜೊತೆ ವಿಮಾ ಸಂಸ್ಥೆಗೆ ಪಾವತಿಸುತ್ತಾರೆ, ಐಎಯ ಸಾಫ್ಟ್‌ಕಾಪಿ ಮತ್ತು ವಿಮೆ ಪಡೆದ ಪ್ರತಿಯೊಬ್ಬ ರೈತನ ವಿವರಗಳನ್ನು ಒದಗಿಸುತ್ತಾರೆ ಮತ್ತು ಬೆಳೆ ವಿಮೆ ಪೋರ್ಟಲ್‌ಗೆ ಡೇಟಾವನ್ನು ನೇರವಾಗಿ ಅಪ್‌ಲೋಡ್‌ಕೂಡ ಮಾಡುತ್ತಾರೆ.

b. <u>ಐಚ್ಛಿಕ ಅಂಶದಡಿ ಸಾಲಗಾರರಲ್ಲದ ರೈತರು- ನೇರವಾಗಿ ವಿಮಾ ಸಂಸ್ಥೆಗಳಿಗೆ</u>

ವಿಮಾ ಖಾತ್ರಿ ಹೊಂದಿರುವ ಸಾಲಗಾರರಲ್ಲದ ರೈತರು ವಿಮಾ ಸಂಸ್ಥೆಗಳಿಗೆ ಪೋಸ್ಟ್ ಮೂಲಕ ಅಥವಾ ಬೆಳೆ ವಿಮೆ ಪೋರ್ಟಲ್‌ಮೂಲಕ, ಅವಶ್ಯಕ ಪ್ರೀಮಿಯಂ ಮತ್ತು ಸಂಬಂಧಿತ ದಾಖಲೆಗಳ ಅಂದರೆ ಭೂ ದಾಖಲೆ ಅಥವಾ ಅನ್ವಯವಾಗುವ ಗೇಣಿದಾರರ ಅಥವಾ ಭೋಗ್ಯದ ಒಪ್ಪಂದ/ ಕರಾರಿನ ಜೊತೆ ಪ್ರಸ್ತಾವನೆ ನಮೂನೆಗಳನ್ನು ಕಳಿಸಬಹುದು.

ವಿಮಾ ಪ್ರಸ್ತಾವನೆಯನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಮಾ ಸಂಸ್ಥೆಗಳು ಕಾಯ್ದಿರಿಸಿಕೊಂಡಿರುತ್ತವೆ. ಒಂದು ವೇಳೆ ಯಾವುದೇ ಪ್ರಸ್ತಾವನೆ ತಿರಸ್ಕೃತವಾದರೆ ಪ್ರಸ್ತಾವನೆ ಸ್ವೀಕೃತಿಯ 1 ತಿಂಗಳೊಳಗೆ ವಿಮಾ ಸಂಸ್ಥೆಗಳು ಪ್ರೀಮಿಯಂ ಮರುಪಾವತಿ ಮಾಡುತ್ತವೆ. ಪ್ರಸ್ತಾವನೆ ನಮೂನೆ ಡೌನ್‌ಲೋಡ್ ಮಾಡಲು ಇಲ್ಲಿ ಕ್ಲಿಕ್ ಮಾಡಿ _______

---

20. ರಾಜ್ಯ ಅನುಸರಿಸುವ ಮತ್ತು ಅಧಿಸೂಚನೆಯ ಪ್ರಕ್ರಿಯೆಗಳು ಯಾವುವು?

a. ಭಾರತ ಸರ್ಕಾರ ಪಿಎಂಎಫ್‌ಬಿವೈ ಯೋಜನೆ ಅನುಷ್ಠಾನಕ್ಕೆ ಆಡಳಿತಾತ್ಮಕ ಸೂಚನೆ ಜಾರಿ ಮಾಡಿದ ಬಳಿಕ ಎಸ್‌ಎಲ್‌ಸಿಸಿಸಿಐ ಸಾಮಾನ್ಯವಾಗಿ , ಬಿಡ್‌ನೋಟಿಸ್‌ಜಾರಿ ಮಾಡುವುದರ ಜೊತೆ, ಬೆಳೆಗಳ ಅಧಿಸೂಚನೆ, ಅಧಿಸೂಚಿತ ಪ್ರದೇಶ, ಹಣಕಾಸಿನ ಪ್ರಮಾಣ, ನಷ್ಟ ಪರಿಹಾರ ಪ್ರಮಾಣ ಇತ್ಯಾದಿಗಳಿಗೆ ಸಂಬಂಧಿಸಿ ವಿವಿಧ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದ ವಿವಿಧ ನಿಯಮ ಮತ್ತು ಷರತ್ತುಗಳನ್ನು ಅಂತಿಮಗೊಳಿಸುವುದಕ್ಕಾಗಿ ಸಭೆ ನಡೆಸುತ್ತದೆ.

b. ಬೆಳೆ ಋತುಗಳ, ಅಂದರೆ ಮುಂಗಾರಿಗೆ ಮಾರ್ಚ್ ಮತ್ತು ಹಿಂಗಾರಿಗೆ ಸೆಪ್ಟೆಂಬರ್, ಆರಂಭಕ್ಕೆ ಕನಿಷ್ಟ ಒಂದು ತಿಂಗಳ ಮುಂಚೆ ಎಸ್‌ಎಲ್‌ಸಿಸಿಸಿಐ ಸಾಮಾನ್ಯವಾಗಿ ಅಧಿಸೂಚನೆ ಜಾರಿ ಮಾಡುತ್ತದೆ ಮತ್ತು ಸಂಬಂಧಿತ ರಾಜ್ಯಗಳ ಅನುಷ್ಠಾನಗೊಳಿಸುವ ಎಲ್ಲ ಏಜೆನ್ಸಿಗಳಿಗೆ ಪ್ರಸಾರ ಮಾಡುತ್ತದೆ.

c. ಬೆಳೆ ವಿಮೆ ಪೋರ್ಟಲ್‌ನಲ್ಲಿ (www.agri-insurance.gov.in) ಅಧಿಸೂಚನೆಯ ಎಲ್ಲ ಅವಶ್ಯಕ ಮಾಹಿತಿಯ ಅಪ್‌ಲೋಡಿಂಗ್‌ಅನ್ನು ರಾಜ್ಯ ಸರ್ಕಾರಗಳ ಮತ್ತು ಆಯ್ದ ಅನುಷ್ಠಾನ ಏಜೆನ್ಸಿಗಳ ಸಹಭಾಗಿತ್ವದಲ್ಲಿ ಅಧಿಸೂಚನೆ ಜಾರಿ ಮಾಡಿದ ಒಂದು ವಾರದ ಒಳಗೆ ಸಿಗುವಂತೆ ಮಾಡಲಾಗುತ್ತದೆ.

---

21. ನೋಂದಣಿ ಮಾಡಿಕೊಳ್ಳಲು ಯಾವುದಾದರೂ ಕಟ್‌ಆಫ್ ದಿನಾಂಕಗಳಿವೆಯೇ?

ಪಿಎಂಎಫ್‌ಬಿವೈ ಮಾರ್ಗಸೂತ್ರಗಳ ಅನುಸಾರ ಕಟ್‌ಆಫ್‌ದಿನಾಂಕಗಳು ವಿವಿಧ ಮಧ್ಯವರ್ತಿಗಳು ಮತ್ತು ಬ್ಯಾಂಕ್‌ಗಳಿಗೆ ವ್ಯತ್ಯಾಸವಾಗುತ್ತವೆ. ಕಡ್ಡಾಯ ಅಂಶದಡಿ ಸಾಲಗಾರ ರೈತರಿಗೆ ವಿಮಾ ಸುರಕ್ಷೆ ಒದಗಿಸುವುದಕ್ಕೆ ಒಟ್ಟಾರೆ ಸಾಲ ನೀಡುವಿಕೆ ಅವಧಿ, ಮುಂಗಾರಿಗೆ - ಏಪ್ರಿಲ್‌ನಿಂದ ಜುಲೈ ಮತ್ತು ಹಿಂಗಾರಿಗೆ ಅಕ್ಟೋಬರ್‌ನಿಂದ ಡಿಸೆಂಬರ್ ಆಗಿರುತ್ತದೆ.

a. ರೈತರಿಂದ ಬ್ಯಾಂಕರ್‌ಗಳು ಪ್ರೀಮಿಯಂ ಸಂಗ್ರಹಿಸಲು- ಸಾಲಗಾರ ಮತ್ತು ಸಾಲಗಾರರಲ್ಲದ ಎರಡೂ ರೈತರಿಗೆ ಪ್ರಸ್ತಾವನೆ ನಮೂನೆ / ಪ್ರೀಮಿಯಂಗಳ ಕಡಿತದ ಕಟ್‌ಆಫ್‌ದಿನಾಂಕಗಳು, ಮುಂಗಾರಿಗೆ - **15**ನೇ ಜುಲೈ ಮತ್ತು ಹಿಂಗಾರಿಗೆ **15**ನೇ ಡಿಸೆಂಬರ್

b. ಬ್ಯಾಂಕರ್‌ಗಳು ವಿಮಾ ಸಂಸ್ಥೆಗೆ ಸಲ್ಲಿಸಲು- ನೋಡಲ್‌ಬ್ಯಾಂಕ್/ ಬ್ಯಾಂಕ್‌ಶಾಖೆಗಳಿಂದ ಕ್ರೋಢೀಕೃತ ಘೋಷಣೆ/ ಪ್ರಸ್ತಾವನೆಗಳ ಸ್ವೀಕೃತಿಗೆ ಕಟ್‌ಆಫ್‌ದಿನಾಂಕಗಳು ಮುಂಗಾರು ಮತ್ತು ಹಿಂಗಾರು ಋತುಗಳಿಗೆ ಅನುಕ್ರಮವಾಗಿ ರೈತರ ಖಾತೆಯಿಂದ ಪ್ರೀಮಿಯಂ ಕಡಿತದ ಕಟ್‌ಆಫ್‌ದಿನಾಂಕದಿಂದ ಸಾಲಗಾರ ರೈತರಿಗೆ **15** ದಿನಗಳ ಒಳಗೆ ಮತ್ತು ಸಾಲಗಾರರಲ್ಲದ ರೈತರಿಗೆ **7** ದಿನಗಳ ಒಳಗೆ ಆಗಿರುತ್ತದೆ.

c. ವಿಮಾ ಮಧ್ಯವರ್ತಿಗಳು ವಿಮಾ ಸಂಸ್ಥೆಗೆ ಸಲ್ಲಿಸಲು- ನಿಯೋಜಿತ ವಿಮಾ ಏಜೆಂಟರಿಂದ ಪ್ರಸ್ತಾವನೆಯ ಸ್ವೀಕೃತಿಗೆ ಕಟ್‌ಆಫ್‌ದಿನಾಂಕಗಳು ಅನುಕ್ರಮವಾಗಿ ಘೋಷಣೆ/ ಪ್ರೀಮಿಯಂ ಸ್ವೀಕೃತಿಯ ದಿನದಿಂದ 7 ದಿನಗಳ ಒಳಗೆ ಆಗಿರುತ್ತದೆ.

ಒಮ್ಮೆ ನಿಗದಿ ಮಾಡಿದ ಮತ್ತು ಅಧಿಸೂಚನೆ ಹೊರಡಿಸಿದ ನಂತರ ಡಿಎಸಿ & ಎಫ್‌ಡಬ್ಲ್ಯು ಆಗಲೀ ಅಥವಾ ಯಾವುದೇ ರಾಜ್ಯ/ ಕೇಂದ್ರಾಡಳಿತ ಸರ್ಕಾರಗಳಾಗಲೀ ಯಾವುದೇ ಪರಿಸ್ಥಿತಿಗಳಡಿ ಕಟ್‌ಆಫ್‌ದಿನಾಂಕಗಳನ್ನು ವಿಸ್ತರಿಸುವ ಅಧಿಕಾರ ಹೊಂದಿಲ್ಲ ಎನ್ನುವುದನ್ನು ಗಮನಿಸಬೇಕು.

---

22. ಪೋರ್ಟಲ್‌ನಲ್ಲಿ ಡೇಟಾ ನಮೂದಿಸಲು ಯಾವುದಾದರೂ ಕಟ್‌ಆಫ್‌ದಿನಾಂಕಗಳಿವೆಯೇ?

a. ಬ್ಯಾಂಕರ್‌ಗಳು ಮತ್ತು ಮಧ್ಯವರ್ತಿಗಳಿಗೆ- ಯಾವುದೇ ಬ್ಯಾಂಕರ್‌ಗಳು ಅಥವಾ ಮಧ್ಯವರ್ತಿಗಳ ಮೂಲಕ ಮಾಡಲಾದ ಎಲ್ಲ ನೋಂದಾವಣೆಗಳಿಗೆ, ಬೆಳೆ ವಿಮೆ ಪೋರ್ಟಲ್‌ನಲ್ಲಿ ವಿಮೆ ಮಾಡಿಸಿರುವ ವೈಯಕ್ತಿಕ ರೈತರ ಡೇಟಾದ ಸಾಫ್ಟ್ ಕಾಪಿ ಅಪ್‌ಲೋಡ್‌ಮಾಡಲು ಕಟ್‌ಆಫ್‌ದಿನಾಂಕಗಳು ಪ್ರೀಮಿಯಂ ಸಂಗ್ರಹ ದಿನಾಂಕದ ಬಳಿಕ 15 ದಿನಗಳ ಒಳಗೆ ಆಗಿರುತ್ತದೆ.

23. ರಾಜ್ಯಗಳು ಇಳುವರಿ ಡೇಟಾವನ್ನು ವಿಮಾ ಸಂಸ್ಥೆಗಳಿಗೆ ಯಾವಾಗ ನೀಡುತ್ತವೆ?

ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ. ಬೆಳೆ ಕಟಾವಿನ ನಂತರ ಎಲ್ಲ ಇಳುವರಿ ಡೇಟಾವನ್ನು ಅಂತಿಮಗೊಳಿಸಲು ಮತ್ತು ವಿಮಾ ಸಂಸ್ಥೆಗಳಿಗೆ ಎಲ್ಲ ಇಳುವರಿ ಡೇಟಾ ಒದಗಿಸಲು ಕಟ್‌ಆಫ್‌ಡೇಟಾ ಅಂತಿಮ ಕೊಯ್ಲಿನ ದಿನಾಂಕದಿಂದ ಒಂದು ತಿಂಗಳ ಒಳಗೆ ಆಗಿರುತ್ತದೆ.

---

24. ಡೇಟಾ ಸ್ವೀಕರಿಸಿದ ನಂತರ ಎಷ್ಟು ಸಮಯದೊಳಗೆ ವಿಮಾ ಸಂಸ್ಥೆ ದಾವೆಗಳನ್ನು ಇತ್ಯರ್ಥಪಡಿಸುತ್ತದೆ?

ವಿಮಾ ಸಂಸ್ಥೆಗಳು, ರಾಜ್ಯ ಸರ್ಕಾರದಿಂದ ಇಳುವರಿ ಡೇಟಾ ಸ್ವೀಕೃತಿಯ ಮೂರು ವಾರದೊಳಗೆ, ಇಳುವರಿ ಡೇಟಾ ಆಧರಿಸಿ ಅಂತಿಮ ದಾವೆಗಳ ಪಾವತಿಗಳನ್ನು ಮಾಡಬೇಕು.

---

25. ವಿಮಾದಾರರಿಗೆ ಬೆಲೆ ನಿಗದಿಪಡಿಸಲು ಅಥವಾ ಪ್ರೀಮಿಯಂ ದರ ನಿರ್ಧರಿಸಲು ಮೂಲ ಅಗತ್ಯಗಳು ಯಾವುವು?

a. ವಿಮಾ ಘಟಕ (ಐಯು) ಎಂದು ಕರೆಯಲಾಗುವ ಆಯ್ದ ನಿರ್ದಿಷ್ಟ ಪ್ರದೇಶದಲ್ಲಿ ಯೋಜನೆ ಏರಿಯಾ ಅಪ್ರೋಚ್‌ತತ್ವದಲ್ಲಿ ಕಾರ್ಯಾಚರಿಸುತ್ತದೆ. ರಾಜ್ಯ ಸರ್ಕಾರ ಪ್ರಮುಖ ಬೆಳೆಗಳಿಗಾಗಿ ವಿಮಾ ಘಟಕವನ್ನು ಗ್ರಾಮ ಪಂಚಾಯತ್ ಅಥವಾ ಅದಕ್ಕೆ ಸಮನಾದ ಇತರ ಘಟಕಗಳಿಗೆ ಮತ್ತು ಸಣ್ಣ ಬೆಳೆಗಳಿಗೆ ಗ್ರಾಮ/ ಗ್ರಾಮ ಪಂಚಾಯತ್‌ಮಟ್ಟ ಮೀರಿದ ಘಟಕ ಗಾತ್ರವನ್ನು ಅಧಿಸೂಚನೆ ಮಾಡಬೇಕು.

b. ಬಿತ್ತನೆ ಅವಧಿಯಿಂದ ಎರಡು ತಿಂಗಳುಗಳ ಒಳಗೆ ವಿಮೆ ಮಾಡಿಸಿದ ಬೆಳೆಯ ಬಿತ್ತನೆ ಪ್ರದೇಶದ ಜೊತೆಗೆ ನಿಗದಿತ ನಮೂನೆಯಲ್ಲಿ ಪ್ರಮುಖ ಮತ್ತು ಸಣ್ಣ ಬೆಳೆಗಳಿಗಾಗಿ ವಿಮಾ ಘಟಕಗಳನ್ನು ಆಧರಿಸಿ ಕನಿಷ್ಟ 10 ವರ್ಷಗಳ ಇಳುವರಿ ಡೇಟಾ ಇತಿಹಾಸವನ್ನು ಎಸ್‌ಎಲ್‌ಸಿಸಿಸಿ ವಿಮಾ ಸಂಸ್ಥೆಗೆ ಒದಗಿಸುತ್ತದೆ.

c. ಯಾವುದಾದರೂ ಇದ್ದಲ್ಲಿ, ಆ ವರ್ಷಕ್ಕೆ ಯಾವುದೇ ಜಿಲ್ಲೆ/ ಪ್ರದೇಶಕ್ಕೆ ಸಂಬಂಧಿಸಿ ಘೋಷಿಸಿದ ವಿಪತ್ತು ವರ್ಷಗಳನ್ನು, ಪ್ರೀಮಿಯಂ ದರಗಳ ಲೆಕ್ಕಾಚಾರಕ್ಕಾಗಿ ವಿಮಾ ಸಂಸ್ಥೆಗಳಿಗೆ ಒದಗಿಸಲಾಗುತ್ತದೆ.

d. ಸಾಲಗಾರ ಮತ್ತು ಸಾಲಗಾರರಲ್ಲದ ರೈತರಿಗೆ ಪ್ರತಿ ಹೆಕ್ಟೇರ್‌ಗೆ ವಿಮೆಯ ಮೊತ್ತ ಒಂದೇ ಪ್ರಮಾಣದಲ್ಲಿರುತ್ತದೆ ಮತ್ತು ಜಿಲ್ಲಾ ಮಟ್ಟದ ತಾಂತ್ರಿಕ ಸಂಸ್ಥೆಗಳು ನಿರ್ಧರಿಸಿದ ಆರ್ಥಿಕ ಪ್ರಮಾಣಕ್ಕೆ ಸಮನಾಗಿರುತ್ತದೆ, ಮತ್ತು ಎಸ್‌ಎಲ್‌ಸಿಸಿಬಿ ಇದನ್ನು ವಿಮಾ ಸಂಸ್ಥೆಗಳಿಗೆ ಮುಂಚಿತವಾಗಿ ಘೋಷಿಸುತ್ತದೆ ಮತ್ತು ಅಧಿಸೂಚನೆ ಮಾಡುತ್ತದೆ.

---

26. ಬಿತ್ತಮೆ ಮಾಡಿದ ಬೆಳೆಗಳು ಮತ್ತು ಬದಲಾವಣೆಗಳ ಬಗ್ಗೆ ಸಂಸ್ಥೆಗೆ ಮಾಹಿತಿ ನೀಡುವ ಪ್ರಕ್ರಿಯೆ ಏನು?

ಒಂದು ವೇಳೆ ರೈತ ಬೆಳೆಯುವ ಬೆಳೆಯನ್ನು ಬದಲಿಸಿದಲ್ಲಿ, ವಿಮೆ ಖರೀದಿಗೆ ಅಥವಾ ಬಿತ್ತನೆಗೆ ಇರುವ ಕಟ್‌ಆಫ್‌ದಿನಾಂಕಕ್ಕೆ ಕನಿಷ್ಟ 2 ದಿನಗಳಿಗೆ ಮುಂಚೆ, ಆರ್ಥಿಕ ಸಂಸ್ಥೆ/ ಮಾಧ್ಯಮ ಸಹಭಾಗಿಗಳ ಮೂಲಕ/ ನೇರವಾಗಿ; ಪ್ರಕರಣಕ್ಕೆ ಅನುಸಾರ, ಯಾವುದಾದರೂ ಇದ್ದಲ್ಲಿ ಪಾವತಿಸಬೇಕಿರುವ ಹೆಚ್ಚುವರಿ ಪ್ರೀಮಿಯಂನೊಂದಿಗೆ, ರಾಜ್ಯದ ಸಂಬಂಧಿತ ಗ್ರಾಮ/ ಉಪ ಜಿಲ್ಲಾ ಮಟ್ಟದ ಅಧಿಕಾರಿ ಜಾರಿ ಮಾಡಿದ ಬಿತ್ತನೆ ಪ್ರಮಾಣಪತ್ರದ ಜೊತೆ ಬದಲಾವಣೆಯನ್ನು ವಿಮಾ ಸಂಸ್ಥೆ ಗಮನಕ್ಕೆ ತರಬೇಕು. ಒಂದು ವೇಳೆ ಪಾವತಿಸಿದ ಪ್ರೀಮಿಯಂ ಮೊತ್ತ ಹೆಚ್ಚಿದ್ದಲ್ಲಿ, ವಿಮಾ ಸಂಸ್ಥೆ ಹೆಚ್ಚುವರಿ ಮೊತ್ತವನ್ನು ಮರುಪಾವತಿಸುತ್ತದೆ..

---

27. ಬ್ಯಾಂಕರ್‌ಗಳು ಮತ್ತು ಮಧ್ಯವರ್ತಿಗಳಿಗೆ ಪಾವತಿಸಬೇಕಿರುವ ಕಮಿಷನ್ ಎಷ್ಟು?

ರೈತರಿಂದ ಸಂಗ್ರಹಿಸಿದ ಪ್ರೀಮಿಯಂನ @4% ಸೇವಾ ದರಗಳನ್ನು ಬ್ಯಾಂಕ್‌ಮತ್ತು ಇತರ ಆರ್ಥಿಕ ಸಂಸ್ಥೆಗಳು ಇತ್ಯಾದಿ ಪಾವತಿಸುತ್ತವೆ. ರೈತರಿಗೆ ವಿಮಾ ಸಂಬಂಧಿ ಸೇವೆಗಳನ್ನು ಒದಗಿಸುವುದರಲ್ಲಿ ತೊಡಗಿರುವ ಗ್ರಾಮೀಣ ಏಜೆಂಟರಿಗೆ, ಐಆರ್‌ಡಿಎ ನಿಬಂಧನೆಗಳಡಿ ಸೂಚಿಸಿರುವ ಮಿತಿಗೆ ಒಳಪಟ್ಟು, ವಿಮಾ ಸಂಸ್ಥೆ ನಿರ್ಧರಿಸಿದ ಸೂಕ್ತ ಕಮೀಷನ್‌ಅನ್ನು ಪಾವತಿಸಬಹುದು.

28. ಈ ಯೋಜನೆಯಡಿ ಸೇವಾ ತೆರಿಗೆ ಅನ್ವಯವಾಗುತ್ತದೆಯೇ?

ಪಿಎಂಎಫ್‌ಬಿಐಗೆ ಸೇವಾ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

HDFC ERGO General Insurance Company Limited. IRDAI Reg. No.146. CIN: U66030MH2007PLC177117. Registered & Corporate Office: 1st Floor, HDFC House, 165-166 Backbay Reclamation, H. T. Parekh Marg, Churchgate, Mumbai – 400 020. For more details on the risk factors, terms and conditions, please read the sales brochure/ prospectus before concluding the sale. Trade Logo displayed above belongs to HDFC Ltd and ERGO International AG and used by the Company under license. UIN: CSC - Pradhan Mantri Fasal Bima Yojana - HDE-AG-P18-25-V01-17-18, Pradhan Mantri Fasal Bima Yojana- IRDAN125P0003V01201617